
# ಕವಿ ಹೃದಯ




ಮಡಿಕೇರಿ ದಸರಾ ಬಹುಭಾಷಾ ಕವಿಗೋಷ್ಠಿ ಸಮಿತಿ - 2011

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ

# ಕವಿ ಹೃದಯ

(ಬಹುಭಾಷಾ ಕವನ ಸಂಕಲನ)

ಮಡಿಕೇರಿ ಜನೋತ್ಸವ

ದಸರಾ ಬಹುಭಾಷಾ ಕವಿಗೋಷ್ಠಿ ಸಮಿತಿ - ೨೦೧೧

೦೨-೧೦-೨೦೧೧

# KAVI HRUDAYA

An anthology of poems published by Madikeri Dasara Bahubasha Kavigosti Samithi - 2011

# ಕವಿ ಹೃದಯ

ಮಡಿಕೇರಿ ಜನೋತ್ಸವ ದಸರಾ ಸಂದರ್ಭ ಬಹುಭಾಷಾ ಕವಿಗೋಷ್ಠಿ ಸಮಿತಿ ಮತ್ತು ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ವತಿಯಿಂದ ಪ್ರಕಟಿಸಲಾದ ಕವನ ಸಂಕಲನ


ಪುಟಗಳು : 70

ವಿನ್ಯಾಸ ಮತ್ತು ರೇಖಾ ಚಿತ್ರಗಳು : ಸತೀಶ್ ಬಿ.ಆರ್.

ಮುದ್ರಕರು : ಶಕ್ತಿ ಪ್ರಿಂಟರ್ಸ್
ಕೈಗಾರಿಕಾ ಬಡಾವಣೆ
ಮಡಿಕೇರಿ - 571 201
☎: 228829, 229202

# ಕವಿ ಹೃದಯ ಮಿಡಿಯುವ ಮುನ್ನ ...

ಐತಿಹಾಸಿಕ ರಾಜಪರಂಪರೆಯ ನಾಡಹಬ್ಬ ಮಡಿಕೇರಿ ದಸರಾ (ಜನೋತ್ಸವ) ಆಚರಣೆಯ ಈ ಶುಭ ಸಂದರ್ಭ ಕೊಡಗಿನ ಜನತೆಗೊಂದು ಸಂಭ್ರಮೋಲ್ಲಾಸ. ಇದೇ ಸಮಯದಲ್ಲಿ ನಡೆಯುವ ನವರಾತ್ರಿಯೂ ಕೂಡ ಜನತೆಗೆ ಹಬ್ಬದ ದೈನಿಕ ಕೈಂಕರ್ಯದ ಸಡಗರವೂ ಹೌದು.

ಮೈಸೂರು ದಸರಾವನ್ನು ಮೀರಿಸುವ ರೀತಿಯಲ್ಲಿ ಮಡಿಕೇರಿ ದಸರಾ ಜನೋತ್ಸವ ಮಾದರಿಯಲ್ಲಿ ಆಚರಿಸುವುದರಿಂದ ಮೈಸೂರು ದಸರಾವನ್ನು ಹೊರತು ಪಡಿಸಿದರೆ ನಂತರದ ಸ್ಥಾನಕ್ಕೆ ಮಡಿಕೇರಿ ದಸರಾ ಭಾಜನವಾಗುತ್ತದೆ.

ಮೈಸೂರಿನಲ್ಲಿ ದಸರಾ ಉತ್ಸವ ಹಗಲು ವೇಳೆಯಲ್ಲಿ ನಡೆದರೆ, ಮಡಿಕೇರಿ ದಸರಾ ಉತ್ಸವವು ಕಾರ್ಗತ್ತಲೆಯ ಅಂಧಕಾರವನ್ನು ಓಡಿಸುತ್ತ ಇಡೀ ನಗರವೇ ಝಗಝಗಿಸುವ ದೀಪಾಲಂಕಾರಗಳ ಮೆರುಗಿನಲ್ಲಿ ಮೇಳೈಸುತ್ತ ಮರುದಿನದ ಮುಂಜಾನೆವರೆಗೆ ನಡೆಯುತ್ತದೆ.

ಈ ದಸರಾ ಸಂಭ್ರಮದ ಅಂಗವಾಗಿ ಅನೇಕ ವರುಷಗಳಿಂದ ಮಡಿಕೇರಿಯಲ್ಲಿ 'ದಸರಾ ಬಹುಭಾಷಾ ಕವಿಗೋಷ್ಠಿ' ನಡೆಸುತ್ತಾ ಬರಲಾಗುತ್ತಿದೆ. ಕೊಡಗು ಜಿಲ್ಲಾ ಮಟ್ಟಕ್ಕೆ ಸೀಮಿತವಾದ ಈ ಕವಿಗೋಷ್ಠಿಯಲ್ಲಿ ಕೊಡಗಿನ ಪ್ರತಿಭಾವಂತ, ಉದಯೋನ್ಮುಖಿ ಕವಿಗಳು ಕಾವ್ಯ ವಾಚನ ಮಾಡುತ್ತಾ ಬರುತ್ತಿದ್ದಾರೆ. ಕನ್ನಡ, ಕೊಡವ, ಅರೆಭಾಷೆ, ತುಳು, ತೆಲುಗು, ಮಲಯಾಳಂ, ಇಂಗ್ಲೀಷ್, ಹಿಂದಿ, ಬ್ಯಾರಿಭಾಷೆ, ಹವ್ಯಕ, ಕೊಂಕಣಿ ಮತ್ತು ಕುಂಬಾರ ಭಾಷೆಯ ಕವನಗಳೂ ದಸರಾ ಕವಿಗೋಷ್ಠಿಯಲ್ಲಿ ವಾಚಿಸಲ್ಪಡುತ್ತವೆ. ಇದೀಗ ಮರಾಠಿ ಭಾಷಾ ಕವನ ಸೇರ್ಪಡೆಯಾಗಿರುವುದು ಬಹುಭಾಷಾ ಗೋಷ್ಠಿಗೆ ಅರ್ಥ ಕಲ್ಪಿಸಿದಂತಾಗಿದೆ.

ದಸರಾ ಕವಿಗೋಷ್ಠಿಗೆ ಈ ವರುಷವೂ ಸುಮಾರು 500ಕ್ಕೂ ಮಿಕ್ಕಿ ಕವನಗಳು ಬಂದಿದ್ದರೂ ಅವುಗಳಲ್ಲಿ ಆಯ್ಕೆ ಮಾಡಬೇಕಾದ ಅನಿವಾರ್ಯತೆಯನ್ನು 'ಆಯ್ಕೆ ಸಮಿತಿ'ಗೆ ಬಿಡಲಾಯಿತು. ಸಮಿತಿ ಆಯ್ಕೆ ಮಾಡಿದ ಕವನಗಳು ಕವಿಗೋಷ್ಠಿಯಲ್ಲಿ ವಾಚಿಸಲು ಅವಕಾಶ ಪಡೆದು, ಈ ಕವಿಹೃದಯದಲ್ಲಿ ಪ್ರಕಟವಾಗಿದೆ.

ಪ್ರಾಕೃತಿಕ ಐಸಿರಿಯ ಬೆಡಗಿನ ಕೊಡಗು ಹಲವು ವರ್ಷಗಳಿಂದ ನಾಡಹಬ್ಬವನ್ನು ಆಚರಿಸಿಕೊಂಡು ಬಂದಿದೆ. ಈ ಸಂಭ್ರಮಾಚರಣೆಯನ್ನು ದಾಖಲಿಸುವ ಕೆಲಸವನ್ನು ಈ ಸಂಕಲನದ ಮೂಲಕ ಮಾಡಲಾಗಿದೆ. ಹಲವು ಭಾಷೆಗಳ ಹಂದರದಲ್ಲಿ ಹೆಣೆಯಲಾದ, ಕೊಡಗಿನ ನೆಲ, ಜಲ, ಜನ, ಸಂಸ್ಕೃತಿ, ಚರಿತ್ರೆ, ಸುಖ ದುಃಖಗಳ ಕುರಿತಾಗಿ ಬಿಂಬಿಸಿ ಮಿಡಿದ ಕವನಗಳು ರಚನೆಯಾಗಿವೆ. ವಿಭಿನ್ನ ಭಾಷೆಗಳಲ್ಲಿ, ಸರಳ ರೂಪಕಗಳಾಗಿ ಇಲ್ಲಿ ತೆರೆದುಕೊಂಡಿವೆ.

ಬಹುಭಾಷೆಗಳಿಂದ ಆಯ್ದು ಕೊಡಗಿನ ಪ್ರತಿಭಾವಂತರಿಂದ ಮೂಡಿ ಬಂದ ಕವನಗಳ 'ಕವಿ ಹೃದಯ'ವಾಗಿ ನಿಮ್ಮ ಮುಂದೆ ಮೂಡಿ ಬಂದಿದೆ.

ಮನೋಭೂಮಿಕೆಯ ಹಲವು ಅನಿಸಿಕೆಗಳು, ಭಾವನೆಗಳು, ಅನುಭವಗಳನ್ನು ಹೇಳಿಕೊಳ್ಳುವ ಸಾಹಿತ್ಯದ ಪ್ರಾಕಾರಗಳಲ್ಲಿ ಕವಿತೆ ಒಂದು ಸೂಕ್ಷ್ಮ ಹಾಗೂ ಸಂಕೀರ್ಣ ಮಾಧ್ಯಮ. ಇಲ್ಲಿನ ಕವಿಗಳಲ್ಲಿ ಅವುಗಳನ್ನು ಕಾಣಬಹುದು.

ಇಲ್ಲಿ ಯಾರೂ ವೃತ್ತಿಪರ ಕವಿಗಳಲ್ಲ. ಸಂತೋಷಕ್ಕೆ ಇಂತಹ ಸಮಯ ಸಂದರ್ಭಗಳಲ್ಲಿ ಕವಿ-ಕವಿಯತ್ರಿಯರು ಒಂದು ಪ್ರಯತ್ನ ನಡೆಸಿರುವುದು ಆಯ್ಕೆ ಸಮಿತಿಯ ಆಯ್ಕೆ ಸಂದರ್ಭ ಗೋಚರಿಸಿದೆ. ಆದರೆ, ಹಲವರು ತಮ್ಮ ಪ್ರಯತ್ನದಲ್ಲಿ ಬಹುತೇಕ ಯಶಸ್ವಿಯಾಗಿದ್ದು, ತಮ್ಮ ಮುಂದಿನ ಪ್ರಯತ್ನಗಳಿಗೆ ಮತ್ತೊಂದು ಅವಕಾಶ ಪಡೆದಿದ್ದಾರೆ. ಆಯ್ಕೆಯಾದವು ಶ್ರೇಷ್ಠ, ಆಯ್ಕೆಯಾಗದಿರುವುದು ಕನಿಷ್ಠ ಎಂಬ ಭಾವನೆಯಿಲ್ಲ. ಆಯ್ಕೆಯ ಇತಿಮಿತಿಯಲ್ಲಿ ಇವನ್ನು ಗಮನಿಸಲೇಬೇಕು.

"ಕವಿ ಹೃದಯ" ಮೂಡಿಬರಲು ಕಾರಣಕರ್ತರಾದ ನಗರಸಭಾಧ್ಯಕ್ಷ, ದಸರಾ ಸಮಿತಿ ಅಧ್ಯಕ್ಷ ಶ್ರೀ ಹೆಚ್.ಎಂ. ನಂದಕುಮಾರ್, ಕಾರ್ಯಾಧ್ಯಕ್ಷ ಶ್ರೀ ರಾಬಿನ್ ದೇವಯ್ಯ, ದಸರಾ ಸಮಿತಿ ಪದಾಧಿಕಾರಿಗಳಿಗೆ, ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷೆ ಐಮುಡಿಯಂಡ ರಾಣಿ ಮಾಚಯ್ಯ ಹಾಗೂ ಅಕಾಡೆಮಿ ಸದಸ್ಯರುಗಳಿಗೆ, ರಿಜಿಸ್ಟ್ರಾರ್‌ರಿಗೆ ಕವಿಗೋಷ್ಠಿ ಸಮಿತಿ ಪರವಾಗಿ ಕೃತಜ್ಞತೆಗಳು.

ಆಹ್ವಾನಿತ ಕವಿಗಳಾಗಿ ಆಗಮಿಸಿರುವ ಶ್ರೀಮತಿ ಅಣ್ಣಮ್ಮ ಎಂ.ಜೆ., ಶ್ರೀಮತಿ ಪಾಲೇರ ರಾಣಿ ಅಪ್ಪಣ್ಣ ಹಾಗೂ ಶ್ರೀ ಬಿ.ಆರ್. ಜೋಯಪ್ಪ ಅವರುಗಳಿಗೂ ಸಮಿತಿ ಅಭಾರಿಯಾಗಿದೆ.

ಈ ಕಾವ್ಯ ಸಂಕಲನಕ್ಕೆ 'ಕವಿ ಹೃದಯ' ಹೆಸರು ಸೂಚಿಸಿದ ಶಕ್ತಿ ದಿನಪತ್ರಿಕೆಯ ಗೆಳೆಯ ಕಾಯಪಂಡ ಶಶಿ ಸೋಮಯ್ಯ, ಮುಖಪುಟ ವಿನ್ಯಾಸವನ್ನು ಚಂದಗಾಣಿಸಿದ ಖ್ಯಾತ ಕಲಾವಿದ ಬಿ.ಆರ್. ಸತೀಶ್, ಅಕ್ಷರ ವಿನ್ಯಾಸ ಮಾಡಿದ 'ಶಕ್ತಿ' ಮುದ್ರಣಾಲಯ, ಕುಡೆಕಲ್ ಸಂತೋಷ್, ಕವನಗಳನ್ನು ಆಯ್ಕೆ ಮಾಡಿ ಸಹಕರಿಸಿದ ಕವಯತ್ರಿ ನಯನಾ ಕಶ್ಯಪ್, ತೆನ್ನೀರ ರಾಧಾ ಪೊನ್ನಪ್ಪ, ಕವಿಗಳಾದ ನಾಗೇಶ್ ಕಾಲೂರು, ಪತ್ರಕರ್ತ ಎಂ.ಇ. ಮಹಮ್ಮದ್ ಇವರುಗಳ ಸಹಕಾರಕ್ಕೆ ಸಮಿತಿ ಧನ್ಯವಾದಗಳನ್ನು ಸಲ್ಲಿಸುತ್ತದೆ.

ಕವಿಗೋಷ್ಠಿಯಲ್ಲಿ ಪಾಲ್ಗೊಂಡು ಕವಿಹೃದಯದಲ್ಲಿ ಅವಕಾಶ ಪಡೆದ ಕವಿಗಳಿಗೆ ಅಭಿನಂದನೆಗಳು.

**ಎಂ. ಶ್ರೀಧರ್ ಹೂವಲ್ಲಿ**

*ಅಧ್ಯಕ್ಷರು, ಕವಿಗೋಷ್ಠಿ ಸಮಿತಿ*

*ಮಡಿಕೇರಿ ಜನೋತ್ಸವ ದಸರಾ ಸಮಿತಿ - 2011*

# ಪರಿವಿಡಿ

## ಆಹ್ವಾನಿತ ಕವನ


| | | |
|---|---|---|
| 1 | ಕೊಯ್ಲು ಕಾಲ | 1-2 |
| 2 | ಪಂಜರ | 3 |
| 3 | ನಾಡ ಬೇರ | 4-5 |


## ಕನ್ನಡ ಕವನ


| | | |
|---|---|---|
| 4 | ಬೊಮ್ಮನ (ಬ್ರಹ್ಮ)ನ ತಪ್ಪೇನು ? | 6 |
| 5 | ಭಯ ನನಗಿಲ್ಲ | 7 |
| 6 | ಇನ್ನಾರಾದಳು ಆಕೆ ? | 8 |
| 7 | ನೆನ್ನೆಯ ನೆನಪಿನಾಚೆ | 9-10 |
| 8 | ನನ್ನ ಮನದ ಕವನ | 11 |
| 9 | ಬಡವ | 12 |
| 10 | ದಣಿದವರು | 13-14 |
| 11 | ಅಧಿಕಾರ | 15 |
| 12 | ತೆರೆಮರೆಯ ತಾರೆ | 16 |
| 13 | ಮೌನದೊಡಲಿನ ಮಾತುಗಳು | 17 |
| 14 | ಕಾವೇರಿ | 18 |
| 15 | ನಮ್ಮೊಳ ಅನಾಥತೆ | 19-20 |
| 16 | ನಿಜಕ್ಕೂ ಬೆಚ್ಚಿದ್ದು ಯಾರು?! | 21-22 |
| 17 | ಕಣ್ಜಾರದ ಕಂಬನಿ | 23 |
| 18 | ಅಣ್ಣ, ಅಣ್ಣಾ ಮತ್ತು ನನ್ನಣ್ಣ | 24-25 |
| 19 | ಕತ್ತಲು | 26 |
| 20 | ನಿರೀಕ್ಷೆಯಲ್ಲಿ | 27 |
| 21 | ಕದಡಿದ ಮನಸ್ಸು | 28 |
| 22 | ಯೋಧ | 29 |
| 23 | ನಿಟ್ಟುಸಿರು | 30 |
| 24 | ಬಿಕರಿಗಿದೆ ಈ ನೆಲದ ಬದುಕು | 31-32 |
| 25 | ಅಂಕದ ಪರದೆ ಜಾರಿದಾಗ | 33-34 |
| 26 | ಮಳೆಬಿಲ್ಲು ರುದು | 35-36 |
| 27 | ಅಯ್ಯೋ ನನ್ನೂರೇ..? | 37 |


## ಕೊಡವ ಕವನ


| | | |
|---|---|---|
| 28 | ಪೊಣ್ಣ್ | 38-39 |
| 29 | ಎನ್ನಂಗ್ ಈ ಪೋರಾಟ್ ! | 40 |
| 30 | ರೈತಂಡ ಗೋಳ್ | 41-42 |
| 31 | ಕೊಡಗ್‌ರ ಮಳೆ | 43-44 |
| 32 | ಪೊಲೆ | 45 |

# ಪರಿವಿಡಿ


ಬ್ಯಾರಿಭಾಷೆ ಕವನ

33 ಉಮ್ಮ 46

ಕೊಂಕಣಿ ಭಾಷೆ ಕವನ

34 ತೇಂ ಫುಡಿ ತೋ ದೀಸ್ 47

ಮರಾಠಿ ಭಾಷೆ ಕವನ

35 ಅಮ್ಚ್ಯಾ ದೇಶ್ಯಾಚ ನಸೀಬ 48

ತೆಲುಗು ಭಾಷೆ ಕವನ

36 ವೀಳ್ಳೇನಾ... ಮನಯುವತಕು ಮಾರ್ಗದರ್ಶಕುಲು...? 49-50

ಕುಂಬಾರ ಭಾಷೆಕವನ

37 ಕವಿಯೇ ಸೌಖ್ಯವೇ, ಕವನವು ಕ್ಷೇಮವೇ 51

ಹವ್ಯಕ ಕವನ

38 ಎನ್ನ ಹೆತ್ತಬ್ಬೆ 52

ತುಳು ಕವನ

39 ಕನಡ್ ಬತ್ತ್‌ನಾಯೆ 53

ಅರೆಭಾಷೆ ಕವನ

40 ತುಡುಗು ದನಗಳ ಪಾಡ್ 54

41 ಮಲೆನಾಡ್ 55

42 ಉತ್ತರನೆ ಇಲ್ಲದ ಪ್ರಶ್ನೆ 56

43 ನೆಂಟ್ರ್‌ಗ 57-58

ಮಲಯಾಳಂ ಕವನ

44 ಅಧಿಕಾರಂ 59

ಮಕ್ಕಳ ಕವನ

46 ನಿಸ್ವಾರ್ಥ ಸೇವೆ 60

47 ಮರೆವು-ನೆನಪು 61

48 ಕಾಗೆ 62

49 ಸ್ಫೂರ್ತಿ-ಕೀರ್ತಿ 63

50 ಚುಟುಕುಗಳು 64

English Poems

51 There I Wander 65

52 An ode to Anna Hazare 66

53 My Native Coorg 67

54 Selfish Humanbeings 68

हिन्दि कवन

55 दशहरा 69

ಆಹ್ವಾನಿತ ಕವನ

# ಕೊಯ್ಲು ಕಾಲ

ಕೊಯ್ಲು ಕಾಲ ಬಂದೈತೆ ಕೊಯ್ಲು ಕಾಲ,
ರೈತಗಲ್ಲ ! ಬಿತ್ತಿ ಬೆಳೆದವನಿಗಲ್ಲ- ಕೊಯ್ಲು ಕಾಲ ಬಂದೈತೆ
ಕೊಯ್ಲುಕಾಲ

ಕಛೇರಿಗನಿಗೆ, ರಾಜಕಾರಣಿಗಳಿಗೆ
ಅಬಕಾರಿಯವನಿಗೆ, ಆರಕ್ಷಕನಿಗೆ,
ರೆವಿನ್ಯೂದವನಿಗೆ, ಆರೋಗ್ಯಾಧಿಕಾರಿಗೆ,
ಕೊನೆಗೆ ಮುನಿಸಿ ಪಾಲಿಟಿಯವನಿಗೂ
ಕೊಯ್ಲುಕಾಲ ಬಂದೈತೆ ಕೊಯ್ಲುಕಾಲ

ಗದ್ದೆ ಪೈರಿನದಲ್ಲ, ಕಾಫಿ ಕಿತ್ತಳೆಯದಲ್ಲ,
ಮೆಣಸು, ಶುಂಠಿಯದಲ್ಲ, ತೆಂಗು, ಅಡಿಕೆಯದಲ್ಲ,
ರಾಗಿ, ಜೋಳದ್ದಲ್ಲ, ಸಜ್ಜೆ ನವಣೆಯದಲ್ಲ, ಉತ್ತುಬಿತ್ತಿದವರಿಗಲ್ಲದ-
ಕೊಯ್ಲುಕಾಲ ಬಂದೈತೆ, ಕೊಯ್ಲುಕಾಲ.

ವರ್ಗಾವಣಾದೇಶದ ಕೊಯ್ಲು, "ಚಲನಾ ದೇಶದ" ಕೊಯ್ಲು.
ಸ್ಥಗಿತ, ಜಗಿತದ ಕೊಯ್ಲು, ಮುಂಗಡ ಹಿಂಬಾಕಿಯ ಕೊಯ್ಲು,
ಮುಂಬಡ್ತಿ, ಪದೋನ್ನತಿಗೆ ಕೊಯ್ಲು
ತಪ್ಪು ಮಾಡಿದುದರ ಕೊಯ್ಲು, ಮಾಡದಿದ್ದುದಕ್ಕೆ ಕೊಯ್ಲು
ಕರ್ತವ್ಯ ಚ್ಯುತಿಗೆ ಕೊಯ್ಲು, ಪ್ರಾಮಾಣಿಕ ದುಡಿಮೆಗೂ ಕೊಯ್ಲು
ಕೊಯ್ಲುಕಾಲ ಬಂದೈತೆ, ಕೊಯ್ಲುಕಾಲ.

ಬಿತ್ತಲಿಲ್ಲ ಬೆಳೆಯಲಿಲ್ಲ, ಏಳಲಿಲ್ಲ, ತರಲಿಲ್ಲ,
ಆದರೂ ಇವರಿಗೆ ತರಾವರಿ ಕೊಯ್ಲು-ಯಾತಕ್ಕೆ ಹೇಳಿ?

ಕೂಡಿಡಲು ಕಣಜ ನಿರ್ಮಾಣಕ್ಕೆ, ಅವಿತಿಡಲು 'ಪಾತಾಳ' ನಿರ್ಮಾಣಕ್ಕೆ-
ಮದುವೆ ಆಗುವುದಕ್ಕೆ, ಮನೆ ಕಟ್ಟುವುದಕ್ಕೆ
ಆಗಿರುವ ಮದುವೆ ಮುರಿಯುವುದಕ್ಕೆ, ಕಟ್ಟಿರುವ ಮನೆಯ ಕೆಡಹುದಕ್ಕೆ-
ಹೆಂಡತಿಯ ಆಸೆ ಪೂರೈಸುವುದಕ್ಕೆ, ಗಂಡನ ದುರಾಸೆ/ದರ್ಬಾರು ನಡೆಸುವುದಕ್ಕೆ
ಕೂರಲು ಕಾರು, ಕುಡಿಯಲು ಬೀರು ಕೊಳ್ಳುವುದಕ್ಕೆ
ಕೊಯ್ಲುಕಾಲ ಬಂದ್ಯೆತೆ, ಕೊಯ್ಲುಕಾಲ.

ಬಡವನ ಹೊಟ್ಟೆ ಉರಿಸುವುದಕ್ಕೆ, ಕೊಯ್ಲೆ ಇಲ್ಲದವನ ಶಾಪ
ಫಲಿಸುವುದಕ್ಕೆ
ಮಾಡದೆ ಹಿಡಿದಿಟ್ಟು ಅನುಭವಿಸುವುದಕ್ಕೆ
ಕೂಡಿಟ್ಟು, ಕೂಡಿಟ್ಟು ಕೊಳೆಸುವುದಕ್ಕೆ
ಕೈ ಕೊಯ್ದು ಕೊಂಡರೂ ಭಯವಿಲ್ಲ ಇವರಿಗೆ,
ಸುಟ್ಟು ಗಾಯವಾದರೂ ಹೆದರಲೊಲ್ಲರು,
ಚಿನ್ನದ ಮೊಟ್ಟೆಯೆಂದು ಹೇಂಟೆಯನ್ನೇ ಕೊಯ್ವರು,
ಜೇನು ಕುಡಿಕೆಯನ್ನೆತ್ತಿ, ಇಡಿಯಾಗಿ ಕುಡಿವರು,
ಕೊಯ್ಲು ಕಾಲ ಬಂದ್ಯೆತೆ ಕೊಯ್ಲುಕಾಲ!

ರೈತನಿಗಾದರೆ ವರ್ಷಕ್ಕೊಮ್ಮೆಯೇ ಕೊಯ್ಲು,
ಅವ ಬೆಳೆದುದನ್ನು ಮಾತ್ರವೇ ಅವ ಕೊಯ್ಯುವನು,
ಇವರಿಗೋ.... ವರ್ಷವೆಲ್ಲಾ ಕೊಯ್ಲು, ಬದುಕೆಲ್ಲಾ ಕೊಯ್ಲು,
ಕೊನೆಗೆ ಬರಿಗೈ ಬೈರಾಗಿಯಂತೆ,
ಕೊಯ್ದುದನ್ನು ಬಿಟ್ಟು, ದುಡಿದುದನ್ನು ಬಿಟ್ಟು,
ಪರಲೋಕ ಪ್ರವಾಸಕ್ಕೆ "ಉಯಿಲು" ಬರೆಸಿಕೊಳ್ಳಲು
ಕೊಯ್ಲುಕಾಲ ಬಂದ್ಯೆತೆ, ಕೊಯ್ಲುಕಾಲ........!

- ಶ್ರೀಮತಿ ಅಣ್ಣಮ್ಮ ಎಂ.ಜೆ. ನೆಲ್ಯಹುದಿಕೇರಿ

ಆಹ್ವಾನಿತ ಕವನ



# ಪಂಜರ

ಗರಿ ಕಿತ್ತ್ ಮೇಲೆ ಹಕ್ಕಿ ಹಾರ್ದುಲೆ
ಇನ್ನ್ ಪಂಜರದ ಹಕ್ಕಿ?
ಅದ್ ಗೂಡೂ ಕಟ್ಟುದುಲೆ, ಕಾಪೂ ಕೂರ್ದುಲೆ
ಬೆಟ್ಟ-ಗುಡ್ಡ, ಹೊಳೆ-ಕೆರೆ
ಮರ-ಕೊಂಬೆ, ಹೂವು-ಹಣ್ಣ್
ಎಲ್ಲಾ ಅಲ್ಲೇ, ಪಂಜರದೊಳಗೇ
ಪಂಜರದ ಹಕ್ಕಿ ಹಾರ್ದುಲೆ, ಹಾಡ್ವೆ!
ಹಾಡಲ್ಲ ಅದ್, ಶೋಕ ಗೀತೆ-ಶಾಪ ಅಲ್ಲದೆ ಮತ್ತೆಂತ?

ಅದೋ ಅಲ್ಲಿ ನೋಡಿ!
ಅದ್ ಪಂಜರದ ಪ್ರಾಣಿ
ಹುಲಿನೋ, ಸಿಂಹನೋ-ಮತ್ತೊಂದೋ
ಹೊಸ ಗಾಳಿ, ಮಳೆ ಹನಿಯ ರೋಮಾಂಚನ ಅದ್ಕೆ ಇಲ್ಲೆ
ಓಟ ಆಟ ತುಂಟಾಟ ಪಂಜರದೊಳಗೇ
ಅಲ್ಲೇ ಪಂಜರದೊಳಗೇ ನಡ್ದ್ ನಡ್ದ್ ಸುಸ್ತಾಗಿ ಬಿದ್ದ್‌ಕಂಡದೆ
ಅರೆ ಹೊಟ್ಟೆಯೋ, ಬರೀ ಹೊಟ್ಟೆಯೋ
ಕೊಟ್ಟರೆ ತಿಂದದೆ ಇಲ್ಲರೆ ಸಂಕಟಪಟ್ಟದೆ
ದೊಂಡೆಯೊಳಗೇ ಗುರುಗುಟ್ಟಿದೆ
ಮನುಷ್ಯನ ಮಜಾ ಮೋಜಿಗೆ ಕಟಕಟಾಂತ ಹಲ್ಲ್ ಕಚ್ಚಿದೆ
ಕಣ್ಣ್ ಮುಚ್ಚಿದೆ

ನಾವು?
ನಮ್ಮದೇ ಪಂಜರದೊಳಗೆ
ಅರ್ಚಿಕಂಡ್, ಕಿರ್‌ಚಿಕಂಡ್-ಪರ್ಚಿಕಂಡ್
ಹೀನ ಮಾನವರಂಗೆ ಗುದ್ದಾಡಿ ಸತ್ತವೆ.

- ಬಿ.ಆರ್. ಜೋಯಪ್ಪ, ಮದೆಗ್ರಾಮ

ಆಹ್ವಾನಿತ ಕವನ



# ನಾಡ ಬೇರ

ಉದಿಪ ಆ ಸೂರ್ಯ
ತಾಂಗುವ ಈ ಭೂಮಿ ದಾಡ ಸೊತ್ತಲ್ಲ
ಬೀಜುವ ಗಾಳಿ ಪರಿಯುವ ನೀರ್
ದಾರೂ ಮಾಡ್‌ನದಲ್ಲ.
ಆಚೇಂಗಿಯೂ ನಿಸ್ವಾರ್ಥಿಯಳಾಯಿತ್
ನಿತ್ಯ-ಕರ್ಮ ಮಾಡಿಯೆಂಡುಳ್ಳ
ಅವು ಶಾಶ್ವತ ಆಯ್ತುಂಡಲ್ಲಾ...
ಈ ಸತ್ಯ ಅರಿಯತ ಸ್ವಾರ್ಥಿ ನರಮನುಷ್ಯ
ಇಂದ್ ಸರ್ವನಾಶ ಆಯೆಂಡುಂಡಲ್ಲಾ.

ಉಳ್ಳದ್ ಪೋರಾಂದ್, ಇಂಞಚ್ಚಕೂ ಬೋಂಡೂಂದ್
ಎಲ್ಲಾ ಬಲ್‌ಚಿ ಕೂಟಿಯೆಂಡ್
ತಾಂಗ್ ಇಚ್ಚಕ್, ತಾಂಡ ಮಕ್ಕಕ್ ಅಚ್ಚಕ್
ಕ್‌ರ್ ಮಕ್ಕಕ್ ಇಂಞಚ್ಚಕ್‌ಂದ್
ದುರಾಸೆಲ್ ಕೆಣಂಜಂಡ್
ಬರೀ ನಾಲ್ ದಿನತ್‌ರ ಬದ್‌ಕ್‌ಕಾಯಿತ್
ಮನುಷ್ಯತ್ವತ್‌ನೇ ಮರ್‌ಂದಂಡುಂಡಲ್ಲಾ...

ಸಂಬಳ ಪೋರಾಂದ್ ಗಿಂಬಳಕಾಯಿತ್
ಭಿಕ್ಷೆಕಾರಕಿಂಜ ಕಡೆಯಾಯಿತ್
ಆಳ್-ಭೇದ ಅರಿಯತೆ ಚೋರೆ ಊತುವ
ಉಂಬುಳುವಡನ್ನೆಕೆ ಅಂಟಿಯೆಂಡ್
ಕ್‌ಟ್ಟ್‌ನ ಪಣತ್, ಪೊಣ್ಣ್-ಮಕ್ಕಡ ಕೂಡೆ
ಕಾರ್-ಜೀಪುಲ್ ಬಲ್ಕರಿಕೆ ಕಳಿಚಂಡ್
ತಿರುವ ಮೂಡಂಗಕ್
ಗರೀಬಂಡ ಕಣ್ಣೀರ್ ಕಾಂಬುಲೆಲ್ಲಾ...

ಅನ್ಯಾಯ ಅಕ್ರಮತ್‌ರ ಒಟ್ಟೈಕ್ ಮುಳ್ಳಾಯಿತ್
ಕಳ್ಳ-ಖದೀಮಂಗಡ ಬುಡತ್‌ನ ಬೇರೋಡೆ ಬಲ್‌ಚಿತ್
ಭ್ರಷ್ಟಚಾರತ್ ದೇಶತ್‌ನಾಳುವ ದ್ರೋಹಿಯಡ
ನಾಶಕಾಯಿತ್ ನ್ಯಾಯ-ಪರ ಪೋರಾಟಕ್‌ಳಿಂಜ
ನಿಷ್ಠುರವಾದಿಯಡ ಕೂಳ್‌ಕ್ ಮಣ್ಣ್‌ಡ್‌ಪೊಕ್
ಪೇಚಾಡಿಯೆಂಡುಳ್ಳ ಮನುಷ್ಯರೂಪತ್‌ರ
ರಾಕ್ಷಸಂಗಕ್ ಇಂಞ್ಞೇಂಗಿ ಬುದ್ಧಿ ಬಕ್ಕುವಾ...
ಇದೇ ನಾಡ ಬೇರ! ನಿಂಗಡಾ...?!

- ಶ್ರೀಮತಿ ಪಾಲೆರ ರಾಣಿ ಅಪ್ಪಣ್ಣ, ಬಲ್ಲಮಾವಟಿ




ಕನ್ನಡ ಕವನ

# ಬೊಮ್ಮನ (ಬ್ರಹ್ಮ)ನ ತಪ್ಪೇನು?

ಬೊಮ್ಮನ (ಬ್ರಹ್ಮ)ನ ತಪ್ಪೇನು?
ತಲೆಮೇಲೆ ಕೈ ಹೊತ್ತು ಕುಂತನಂತೆ ಬೊಮ್ಮನು!
ಇಂತಹದೊಂದು ಸೃಷ್ಟಿಯ ನೆನೆದು
ಇಂದ್ರನು ಪುಕಾರು ಮಾಡಿದನು ದೇವಾನು ದೇವರಲ್ಲಿ;
ಇಂದ್ರ ಲೋಕದಲ್ಲೂ ಇಲ್ಲಾ ಇಂಥ ಸೃಷ್ಟಿಯೆಂದು,
ಕಣ್ಣ ರೆಪ್ಪೆಗಳು ಒಂದನೊಂದು ಭೇಟಿಯಾಗಲಿಲ್ಲ!
ನಮ್ಮ ಮಣ್ಣ ಐಸಿರಿಯ ಕಣ್ತುಂಬ ಆನಂದಿಸಿ,
ನೆಲ ಮೆಟ್ಟಿದ ಪಾದವದು ಪಾವನವಾಯಿತು,
ಕಾಶಿಯ ಪುಣ್ಯದಕ್ಕಿತು ಸಪ್ತ ಜನುಮಗಳಿಗಾಗುವಷ್ಟು!
ಹರಿವ ಇವಳ ಕಾಲಿಗಾರು ಮುತ್ತಿನ ಗೆಜ್ಜೆಯಿಟ್ಟರೋ?
ನಡೆವ ದಾರಿಯೆಲ್ಲ ಝುಳು ಝುಳು ಮಾಯೆ
ಪಚ್ಚೆ ರೇಷಿಮೆ ಸೀರೆಯಲ್ಲಿ,
ಚಿನ್ನದ ಮಾವಿನ ಎಳೆಗಳು ಅರಳುವಂತೆ!
ಅಲ್ಲಲ್ಲಿ ಧುಮ್ಮಿಕ್ಕುವ ಹಾಲಿನ ನೊರೆಗಳು,
ಇಲ್ಲಿರುವ ಖಗಗಳಿಗೆ ಮಾತ್ರ ಸಂಗೀತ ಗುರು ಇರುವನೋ?
ಎಲ್ಲಾ ಕೂಗುಗಳು ಸಪ್ತ ಸ್ವರಗಳಾಗಿವೆ
ಆಗಲೇ ಹೊರಟರಂತೆ ದೇವಾನು ದೇವತೆಗಳು
ಹೊರವಿಹಾರಕ್ಕೆಂದು "ನಮ್ಮೂರ" ಅರಸಿ!
ದಶಮಂಟಪಗಳಲ್ಲಿ ಆಸೀನರಾಗಿ
ಪಡೆದುಕೊಳ್ಳುವ ಒಂದಿಷ್ಟು ಆಶೀರ್ವಾದದ
ಸಕಲ ಜನುಮಗಳಿಗಾಗುವಷ್ಟು!

- ಸುಚಿತ್ರ ಸಿ., ಮಡಿಕೇರಿ



# ಭಯ ನನಗಿಲ್ಲ

ಕಳೆದುಕೊಳ್ಳುವ ಭಯ ನನಗಿಲ್ಲ
ಏಕೆಂದರೆ ಕೂಡಿಡುವ ಅಭ್ಯಾಸ ನನ್ನದಲ್ಲ
ನಾನು ಭೌಮಾಕ ಜಗತ್ತಿನ ಮನುಷ್ಯ;
ಇಡೀ ಭೂಮಿ ನನ್ನ ಮನೆ
ಆಕಾಶ ಅದಕ್ಕೆ ಛಾವಣಿ, ತಾರಸಿ

ನಕ್ಷತ್ರಗಳನ್ನು ಹತ್ತಿರದಿಂದ ಬಲ್ಲೆ
ರಾತ್ರಿ ಚಂದ್ರಮ ಅನಾಥ ಪಕ್ಷಿಗಳನ್ನು
ತಟ್ಟಿ ಮಲಗಿಸುವ ಲಾಲಿಹಾಡು
ನನಗೂ ಕೇಳಿಸುತ್ತದೆ!
ಏಕೆಂದರೆ ನಾನೂ ಒಬ್ಬ ಅನಾಥ

ಅರಮನೆಯಿಲ್ಲದ ರಾಜಕುಮಾರ
ನಡುರಾತ್ರಿಯಲ್ಲಿ ಆಸೆಯ ಕಂದೀಲು ಉರಿಸಿ
ಶತ್ರು ಒಳಕ್ಕೆ ಸುಳಿಯದಂತೆ ಕೋಟೆ ಕಟ್ಟುತ್ತೇನೆ
ಗೆಲ್ಲುತ್ತೇನೆ 'ಅಕ್ಷರ ಪ್ರಪಂಚದ' ಸಣ್ಣ ಹಿಡುವಳಿ
ಬಿತ್ತಿ ಬೆಳೆದು "ನನ್ನವರ" ಹಸಿವು ನೀಗುತ್ತೇನೆ
ನಿಶೆಯ ತೊಡೆದು ಮಿಣುಕು ಹುಳುಗಳ ಕಾವಲಿಗಿಡುತ್ತೇನೆ.

ಎದ್ದು ನಿಲ್ಲುತ್ತೇನೆ ಎಂದಾದರೊಮ್ಮೆ
ಬಿದ್ದು ಹೋಗುವೆನೆಂಬ ಭಯ ನನಗಿಲ್ಲ
ಏಕೆಂದರೆ ಗೆಲ್ಲಲೇಬೇಕೆಂದು ಹುಟ್ಟಿದವನು ನಾನಲ್ಲ...

- ಉದಯಕುಮರ್ ಎಂ. ಬಸವನತ್ತೂರು,
ಸೋಮವಾರಪೇಟೆ

# ಇನ್ನಾರಾದಳು ಆಕೆ ?



ದಾರಿಯ ಕೊನೆಯ ತಿರುವಿನಲಿ
ಅಳಿದುಳಿದ ತ್ಯಾಜ್ಯದ ನಡುವಿನಲಿ
ಸುಕೋಮಲದ ಬೆರಳುಗಳೇನನೋ ತಡಕಾಡುತ್ತಿತ್ತು.

ಬೆನ್ನಿಗಂಟಿದ ಪೇಲವ ದೇಹದಲಿ,
ಆಸೆಗಳು ಕಮರಿದ ಕಂಗಳಲಿ,
ಮಣ ಭಾರದ ಚೀಲ ಹೆಗಲಲ್ಲಿತ್ತು.

ಭರವಸೆ ರಹಿತ ಬಾಳಿನಲಿ,
ಕನಸೇ ಬಾರದ ರಾತ್ರಿಗಳಲಿ,
ಮುದುಡಿ ಮನವು ಎದೆಯಲಡಗಿತ್ತು.

ಕಂಬನಿ ಒರೆಸುವ ಕೈಗಳಿರದಿರಲು,
ನಿರ್ಲಿಪ್ತ ಬದುಕೇ ಒಡನಾಡಿಯಾಗಿರಲು,
ನೀರವತೆಯ ಮೌನ ಆವರಿಸಿತ್ತು.

ಅನವರತ ಪಾದಾಚಾರಿ ಕಂಗಳಿಗೋ
ತಮ್ತಮ್ಮ ಹಾದಿ ಸವೆಸುವ ತವಕವೇ...
ಕಾರಣ... ಆಕೆ...

ಬರಿಯ ಚಿಂದಿಯಾಯುವ ಹುಡುಗಿಯೇ....!

- ಸೌಮ್ಯ ಶೆಟ್ಟಿ ಬಿ.ಬಿ., ಮಡಿಕೇರಿ

# ನೆನ್ನೆಯ ನೆನಪಿನಾಚೆ

ದಾರಿಹೋಕನೊಬ್ಬ ದಾರಿ ದೀಪವಾರಿದಾಗ
ಹಾಡುತ್ತಾ ಸಾಗುತ್ತಿದ್ದ ದೂರ ದೂರದಾಚೆ
ಬೆಂಗಳದಿಂಗಳ ಧ್ವನಿಯಿರಲಿಲ್ಲ ಹಾಡಿನಲಿ
ಅನುಭವಗಳ ಹೀನವಾಸನೆ ನೆನ್ನೆಯ ನೆನಪಿನಾಚೆ...

ತಿರುಗುವ ಭೂಮಿಯಲಿ ಎಲ್ಲೂ ಹಿಡಿಯದೆ
ಪ್ರಸಾದ ವೀ ಬದುಕು ಕೆಲಕಾಲವನ ಮರೆತು
ಸೇಡ ತೀರಿಸುವ ಹಂಬಲ ಬಿಡದೆ
ಅಸುರ ತಾಳದಲಿ ಪಯಣ ಹಿಡಿದು

ಹೆತ್ತು ಎಸೆವರು ಕಸದ ತೊಟ್ಟಿಗೆ
ಮುತ್ತು ಕೊಡದೆ ಪುಟ್ಟ ಪುಟಾಣಿಯನು!
ಮತ್ತು ಹೋಗದ ಅಪ್ಪನವನು
ಮುಗ್ಧರ ಅರಿವಿನ ಕದ ಮುಚ್ಚುವನು


ಸಮಯ ಕಳೆದಂತೆ ಅಳಿಯಿತು ಪ್ರೀತಿ
ಮನವನಾಕ್ರಮಿಸಿ, ನೋಯಿಸಿ, ಪೀಡಿಸಿ
ಕಟ್ಟಿದ ತಾಳಿಯ ಕಿತ್ತೆಸೆಯುವ ವೀರಾವೇಶ!
ಪರಸ್ತ್ರೀ ಸಂಬಂಧಕ್ಕೆ ಉಡನಂತ ಹಿಡಿತ

ಹೆತ್ತ ಜೀವಗಳ ದೂರ ಮಾಡುತ
ಬಿರುಗಾಳಿಯಂತೆ ಬಂದು ಹೋಗುವರು
ಆಶ್ರಯವಿಲ್ಲದ ಭಯದ ವೃದ್ಧಾಪ್ಯ
ಉಸಿರುಗಟ್ಟಿಸುವ ಕಾಲವೆ ಬಂದೀಖಾನೆ!

ಗುಡಿಸಲ ಹಬ್ಬದಲಿ ಸಿಹಿಯಿಲ್ಲ ಎಲೆಗೆ
ಬಡ್ಡಿಯ ಹಣ ತಿಂದು ಸಿರಿವಂತ ಮದದಲಿ
ಕಾಮ ಬಾಧೆಯಲೂ ಅದೆಷ್ಟು ವೇಷಗಳೂ
ಕೊರಗಿ ಸೊರಗಿ ಸಾಯುವುದು ಕೊನೆಗೆ...

ಅನುಭವದ ಹಾದಿಯಲಿ ಹೆಜ್ಜೆ ಊರುವಾಗ
ಊತು ಹೋಗದ ಅದೆಷ್ಟು ನೆನಪುಗಳೂ....
ಮಣ್ಣಲ್ಲೂರಿದ ಗುರುತು ಮಾಯಬಹುದು
ಎದೆಯಲ್ಲೂರಿದ ಆ ಹೆಜ್ಜೆಗಳೂ....?

- ಕೆ.ಕೆ. ಸುನಿತ, ಸಹಶಿಕ್ಷಕಿ, ಸೋಮವಾರಪೇಟೆ



# ನನ್ನ ಮನದ ಕವನ



ಬರಿದಾದ ಈ ಮೌನದ ಕವನ
ಬರೆದೆನು ಕಾಣದ ಕನಸಲಿ ನಾ....
ಹಾರುವ ಗಿಳಿಗಳ ನೋವಿನ
ಹಾರದ ಮರಿಯು ನಾ....

ಜಾರುವ ಕಂಬನಿಯೊಂದಿಗೆ
ಸಾಗುವ ನೋವಿನ ನಾವಿಕನು ನಾ...
ತುಂತುರು ಮಳೆಯಲ್ಲಿ ನೆನೆದು
ಬಿಕ್ಕಿ ಅಳಲೇನು ನಿನಗಾಗಿ ನಾ...

ಸಾವಿರ ನೆನಪು ಸಾಯುವ ಮುನ್ನ
ಕೂಗಿ ಕರೆಯಲೇನು ನಾ....
ಏಳು ಜನ್ಮದ ಪ್ರೀತಿನ
ಒಂದೇ ದೋಣಿಯಲ್ಲಿ ಕಳಿಸಲೇನು ನಾ....

ಮನದ ನಿನ್ನ ಮರುಭೂಮಿಯಲ್ಲಿ
ಮಳೆಹನಿಯಾಗಿ ಬರಲೇನು ನಾ....
ಕಾಣುವ ನೂರು ಕನಸಲು ಕಾಯುವೆನು ನಿನಗಾಗಿ ನಾ...

ಪ್ರೀತಿಯ ಕಡಲಲ್ಲಿ ಪಿಸುಗುಡುವ
ತೀರದಲ್ಲಿ ನೆನಪಾಗಿ ಅಪ್ಪಿಕೊಳ್ಳಲೇನು ನಾ...
ಭಾವನೆಗಳಿಲ್ಲದ ಭೂಮಿಯಲ್ಲಿ ಭರವಸೆಗಳಿಲ್ಲದ
ಬದುಕಿನಲ್ಲಿ ಪಂಜರದೊಳಗಿನ ಹಕ್ಕಿಯು ನಾ....

- ಅಕ್ಷತಾ ದಯಾನಂದ ಶೆಟ್ಟಿ, ಮಡಿಕೇರಿ

# ಬಡವ



ಹೊತ್ತು ಅನ್ನಕ್ಕೆ ಪರದಾಡುವ ಬದುಕು
ಜಗಕ್ಕೆ ಭಾರ ಎಂಬ ಜನುಮವೇತಕೆ ಬೇಕು
ಕಾಡಿಬೇಡಿ ಸಿಗುವ ಈ ಊಟದ ರುಚಿಯೇ ಸಾಕು
ಜೀವನವೇ ಬೇಡವೆಂಬ ಬಡವನ ಬದುಕು.

ಸುಂದರ ಸಂಜೆಯ ಪರಿವೇ ಈತನಿಗಿಲ್ಲ
ಜೀವನದಲ್ಲಿ ಸಂತೋಷವೇ ಗೊತ್ತಿಲ್ಲ
ಅಲೆದಾಟ ಪರದಾಟದ ಜೀವನ ಕೇಳುವರಿಲ್ಲ
ಕೇಳು ಜಗವೇ ಬಡವನ ಕಷ್ಟಗಳು ಒಂದಲ್ಲ ಎರಡಲ್ಲ.

ದೇಶ ಕೆಡಲು ಬಡವನ ಬದುಕೇ ಸಾಕ್ಷಿ
ತುತ್ತು ಅನ್ನ ಸಿಗದ ಇವನೇ ನರ ಭಕ್ಷಿ
ಮಾಡಲು ಮುಂದಾಗುವ ಚಟಗಳ ರಾಶಿ
ದೇಶಕ್ಕೆ ಬೇಕು ನಿರ್ಮೂಲನ ಈ ಬಡತನ ಪಿಶಾಚಿ

ದುಡಿಯೋಣ ಬಾ ಗೆಳೆಯ ಸಿಗುವುದು ಬಾಳಿಗೆ ನೆಮ್ಮದಿ
ಸಾಕು ಬೇಡುವ ಬದುಕು ಮಾನವರಾಗಿ
ಕಟ್ಟೋಣ ಸುಂದರ ದೇಶ, ಅದು ಭಾರತ ದೇಶದ ನಿಧಿ
ಕೈ ಜೋಡಿಸಿ ಎಲ್ಲರೂ ಒಂದಾಗಿ ಬಾಳೋಣ ಅಭಿವೃದ್ಧಿಗಾಗಿ.

- ಅಬ್ದುಲ್ ರಶೀದ್ ಪಿ.ಎ., ಕೊಳಕೇರಿ



# ದಣಿದವರು

ದಣಿವರಿಯದ ದೇಹವನೊತ್ತು
ದೌರ್ಜನ್ಯ, ದಬ್ಬಾಳಿಕೆ ಶೋಷಣೆಯ
ಸೂಲಕ್ಕೆ ಸಿಲುಕಿ, ದರಿದ್ರವೆಂಬುದು
ನಮ್ಮ ವಾಸ್ತವ ಬದುಕಲ್ಲವೆಂಬ
ಸತ್ಯವನ್ನರಿಯದ ಸತ್ಯವಂತರಿವರು ||೨||

ಧರ್ಮಗಳೊಳಗಿನ ಮರ್ಮವರಿಯದ
ಕರ್ಮಯೋಗಿಗಳ ಸಂತತಿಯವರು
ಅಗಣಿತ ಅನ್ಯರ ಹಿತವ ಬಯಸುತ
ಸುಖವೆಂಬುದನ್ನರಿಯದ ಈ ಮನುಜರು
ಸಕಲ ಸಂಪತ್ತಿನಿಂದ ದೂರ ಸರಿದವರು ! ||೨||

ಸಿಂಧ್‌ಪ್ರಾಂತ್ಯದ ಭಾರತದೊಡಲಲ್ಲಿ
ಆದಿಮೂಲದ ಸಮರ್ಥಸಾಮಂತರಾಗಿದ್ದು,
ಪ್ರಕೃತಿಯ ಒಡನಾಟದಿಂ ಪಂಚಭೂತಗಳ ನಂಬಿ
ಹೊಲದೊಡೆಯರಾಗಿದ್ದ ಈ ಮಂದಿ
ಪರದೇಶಿಯರಾಗಮನದಿಂ ಹೊಲೆ, ಮಾದಿಗರಾದವರು ||೨||

ನಾವ್ ದುಡಿದರೆ ತಾನೇ ಒಡೆಯರು ಬಾಳ್ವರು
ನಾವಳಿದರೇನಂತೆ! ಅನ್ಯರು ಉಳಿವರು
ನಾಡಿರಲಿ ಕಾಡಿರಲಿ, ಕರಗಳು ದುಡಿಯಲಿ
ಹುಟ್ಟು-ಸಾವಿನ ಗುಟ್ಟು ನಮಗ್ಯಾಕೆಂದೆನುತ
ನೋವಿನಲೂ ನಲಿಯುತ ನಾಡಕಟ್ಟಿದವರು ||೨||

ಅದಮ್ಮ ಜ್ಞಾನದ ಅಂಬೇಡ್ಕರವರ ಅರಿವಿನಿಂದ
ಬುದ್ಧ ದಮ್ಮದ ಸೋಂಕಿನಿಂದ
ನಮ್ಮ ಶ್ರಮದ ಫಲವ ಭಿನ್ನರೇಕೆ ಉಣ್ಣಬೇಕು?
ನಮಗೂ ಹಸಿವಿದೆ, ಬದುಕಿದೆಂಬ ಸತ್ಯವರಿತು
ದೇಶದೊಳಗಣ ಸಕಲ ಹಕ್ಕುಗಳ ಪಾಲುದಾರರಾಗಿಹರು ||೨||

-ಬಿ. ಸಿದ್ಧರಾಜು ಬೆಳ್ಳಯ್ಯ, ಮದೆಗ್ರಾಮ



# ಅಧಿಕಾರ



ಇಪ್ಪತ್ತು ಸಿಗದಿರುವೆಡೆ ಮಗನಿಗಾಯ್ತು ನಿರಾಸೆ,
ಇಪ್ಪತ್ತು ಇಪ್ಪತ್ತು ಇಪ್ಪತ್ತು ಸಿಕ್ಕಿದಾಗ ಬಂತು ಗಮ್ಮತ್ತು,
ಬಹು ಆಶೆ ಕನಸು ಪ್ರತೀಕಾರಗಳನು ಹೊತ್ತು,
ಬಹುವಿಧ ಸುಧಾರಣೆಗಳೊಂದಿಗಿತ್ತು ಕಸರತ್ತು.

ನಲಿವು ತನಗುಂಟೆಂದು ಬಗೆದು ಸಂಭ್ರಮಿಸಿ,
ಗೆಲುವು ತನಗಾಯಿತೆಂದು ಬಲು ಹರುಷಗೊಂಡು
ಬದುಕುವೆನು ಶತ ಸಂವತ್ಸರವೆಂದೆನುತ,
ತದುಕುವೆನು ಅರಿಕುಲ ಸಂಕುಲವನೆಂದು ತಿಳಿಯುತ,
ಬಾರನು ಜವರಾಯ ತನ್ನೆಡೆಗೆಂದಿಗೂ ಎಂದೆನುತ,
ದಾರಪುತ್ರಾದಿಗಳು ಸುಕ್ಷೇಮಿಗಳು ತನ್ನ ಬಳಿಕವೆಂದು,
ಮಾಟಗಾರ ಮಂತ್ರವಾದಿಗಳ ವಿಷಮ ಸಂಕುಲಗಳ,
ಕೂಟವನೆ ರಚಿಸಿ ಶತ್ರು ನಿರ್ಮೂಲ ಯಾಗಗಳ ಮಾಡಿಸಿ,
ಕೆಡಿಸಿ ನ್ಯಾಯ ಸೂತ್ರವನು ಮೀರಿ ಧರ್ಮ ಕರ್ಮಗಳ,
ನಡೆಯಲಿ ಗದರಿ ಬೆದರಿ ಗರ್ಜಿಸುತಿರಲು ಭಯಂಕರನಾಗಿ,
ವಚನದಲಿ ಶುಚಿಯಾಗಿ ಕದನದಲಿ ಶೂರನಾಗಿ,
ರಚನೆಯಲಿ ಸಾಧುವಾಗಿ ದುಷ್ಟ ಸಂತತಿ ಸಲುವಾಗಿ,
ಪಯ ಉದರಿ ಸಖನಾಗಿ ಕಾಂಚನದ ದಾಸನಾಗಿ ಜಗವರಿಯೆ;

ಲಯ ರುದ್ರನಾದ ಲೋಕಾಯುಕ್ತನಿಂ ತತ್ತರಿಸಿದೆ ಮಗನೇ,
ಸವಣನಂತೆ ತೋರಿದೆ ನೀ ಮತದಾರರ ಬಳಗಕೆ,
ಲವಣ ಮುಕ್ಕಿದೊಡೆ ಜಲ ಸೇವಿಸದೆ ಮುಕ್ತಿಯುಂಟೇ?

ಆರು ಬರುವರೈ ನಿನ್ನೀ ಕಡು ಕಷ್ಟಕಾಲ ಸಮಯದಲಿ?
ನೂರಾರು ಹಗರಣಗಳ ಸರಮಾಲೆ ಪದಕಗಳ ರಾಶಿಯಲಿ.

- ಬಿ. ಆರ್. ರಾಮಚಂದ್ರರಾವ್, ಗುಹ್ಯಗ್ರಾಮ



# ತೆರೆಮರೆಯ ತಾರೆ...

ಕಪ್ಪನೆಯ ಕಾರ್ಮೋಡದಾ ಸೆರಗಲಿ
ಅವಿತಿರಲು ನೂರಾರು ತಾರೆಗಳು;
ಬೆಳಕ ಚೆಲ್ಲಬಯಸಿದರೂ ಅಡ್ಡಲಾಗಿ
ತೆರೆಯ ಎಳೆದಿದೆ ಕಾರ್ಮೋಡ.

ಎನಗಿಂತ ಹೊಳಪು ತೋರಬಾರದೆಂದು
ತೆರೆಯ ಮುಂದೆ ಕಂಡರೆ ತಾರೆ,
ಹೊಳಪ ಚೆಲ್ಲುತ ತನ್ನ ಮರೆಸುವುದು,
ಜಗವು ದೂರವಿರಿಸುವುದೆನ್ನ...

ಕಲ್ಮಶವ ಮನದಲುದುಗಿಸಿ,
ತಾರೆಗಳ ಹೊಳಪ ಸೂಸ ಬಯಸದಾ ಮೋಡ,
ಆಗಸದಲ್ಲೋಡುತಿದೆ... ಕಪ್ಪು ಕಾರ್ಮೋಡ
ಹಿಡಿತಕ್ಕೂ ಸಿಗದೆ ಓಡುತ್ತಿದೆ ಮುಂದೆ...

ಯಾರು ಕರೆದಿರುವರೋ, ಬರಲೆಂದು ಅದನು;
ಕೈ ಚಾಚಿ ನಾ ಕರೆದರೂ ತಿರುವಿ ನೋಡದೆ
ಓಡುತಿದೆ ಎನ್ನ ಕರೆಗೋಗೊಡದೆ...,

ಬೀಸುತಿಹ ಗಾಳಿಯ ಬಲವಾದ ಹೊಡೆತಕ್ಕೆ
ಗುಡುಗು-ಮಿಂಚುಗಳಾರ್ಭಟದ ತೆಕ್ಕೆಗೆ
ಸಿಲುಕಿ ಕರಗಿ ಕರಗಿ ಸುರಿಯುತಿದೆ
ಮನಸ್ಸಿಲ್ಲದೆಯೋ, ಬಲವಂತಕೋ
ಕರಗಿ ಭುವಿಯಾಲಂಗಿಸಿತು...

ತೆರೆಮರೆಯಲಿ ಮರೆಮಾಚಿದ ತಾರೆಗಳು
ಹೊಳೆದವು ಮೋಡಗಳ ಸುಳಿವಿಲ್ಲದೆ
ಸ್ವತಂತ್ರವಾಗಿ....

- ಸುದಿನ ಪಿ.ಆರ್., ಸುಳ್ಯ


# ಮೌನದೊಡಲಿನ ಮಾತುಗಳು



ಬತ್ತಿದ ಕಣ್ಣಲ್ಲಿ.....
ಬರುತ್ತಿಲ್ಲ ಕಣ್ಣೀರು...
ಕಳೆದ ಬದುಕಿನ ಒಡಲಾಳದ ನೂರೆಂಟು
ನೋವುಗಳು.... ಬೇಡ... ಬೇಡವೆಂದರು...
ಎದೆಯ ಕದವ ತೆರೆದು
ಕಾಡುವ ಈ ಪರಿ ಎಂತದು?
ದಯಮಾಡಿ ನನ್ನಷ್ಟಕ್ಕೆ ನನ್ನನ್ನು ಬಿಟ್ಟು ಬಿಡಿ ಎಂದು
ಮನದಾಳದಿಂದ ಬೇಡಿದರು...
ಮತ್ತೆ ಮತ್ತೆ... ಕಾಡುತ್ತಿವೆ
ಓ.... ಕ್ರೂರಿ ನೆನಪುಗಳೇ
ಏಕೆ? ಕಾಡುತ್ತೀರಿ.... ಈ
ನನ್ನ ಮುಗ್ಧ ಮನವ...
ನೀಲಾಕಾಶದಲ್ಲಿ ಹಾರುವ ಹಕ್ಕಿಯಂತೆ
ಗಿರಿ ಕಂದರಗಳ ನಡುವೆ...
ಹರಿವ ನೀರಿನ ಜುಳು, ಜುಳು ಕಲರವದಂತೆ
ದಿವ್ಯ ವೈಣಿಕನ ಸಂಗೀತದ ನಾದದಂತೆ
ಬದುಕಲ್ಲಿ ಹರುಷ... ಚೇತನ.... ಚೈತನ್ಯ...
ಈ ಭಾವುಕ ಮನಸ್ಸಿನ ಬದುಕಲ್ಲಿ...
ಬರಬಾರದೇ ಎಂದು...
ಮೌನದಲ್ಲಿ ಕನವರಿಸುತ್ತಿದ್ದೇನೆ.

- ನ. ಲ. ವಿಜಯ, ಸೋಮವಾರಪೇಟೆ

# ಕಾವೇರಿ



ಕೊಡಗಿನ ಗಿರಿಯಲ್ಲಿ
ಬ್ರಹ್ಮಗಿರಿಯ ತಪ್ಪಲಲ್ಲಿ
ಹುಟ್ಟಿ ಬರುತ್ತಾಳೆ
ಕೊಡಗಿನ ಕಾವೇರಿ.

ಭಕ್ತರ ಪಾಪಗಳೆಲ್ಲವನ್ನು
ಕಳೆದು ಎಲ್ಲರಿಗೂ
ಮುಕ್ತಿಯನ್ನು ನೀಡುತ್ತಾಳೆ
ಕೊಡಗಿನ ಕಾವೇರಿ.

ತಾನು ಹರಿಯುವ
ನಾಡಿನುದ್ದಗಲಕ್ಕೂ ಎಲ್ಲರ
ಬಯಕೆಗಳ ಪೂರೈಸಿ
ಬದುಕನ್ನು ಪಾವನಗೊಳಿಸುತ್ತಾಳೆ
ಕೊಡಗಿನ ಕಾವೇರಿ.

ತಾನು ಹರಿಯುವ
ಪಥದ ಇಕ್ಕೆಡೆಗಳಲ್ಲಿ
ಎಲ್ಲರ ಪಾಪಗಳನ್ನು ಕಳೆಯುತ್ತಾ
ಬಂಗಾಳ ಕೊಲ್ಲಿಯಲ್ಲಿ ಲೀನವಾಗುತ್ತಾಳೆ
ಕೊಡಗಿನ ಕಾವೇರಿ.

ಬ್ರಹ್ಮಗಿರಿಯಿಂದ ಬಂಗಾಳಕೊಲ್ಲಿ
ಪರ್ಯಂತ ಎಲ್ಲಾ ಜನರ
ಭಕ್ತಿ ಭಾವದಿಂದ ಕೂಡಿದ
ಪೂಜೆಯನ್ನು ಪಡೆಯುತ್ತಾಳೆ
ಕೊಡಗಿನ ಕಾವೇರಿ.

- ಬಿ.ಬಿ. ಕಿಶೋರ್‌ಕುಮಾರ್, ತಾವೂರು



# ನಮ್ಮೊಳ ಅನಾಥತೆ


ಕಣ್ಣೊಳಗೆ ಜ್ಞಾನಿಯ ನಿರ್ಲಿಪ್ತತೆ
ನಡೆಯೊಳು ತಂಗಾಳಿಯ ನಿಧಾನತೆ
ಹಸಿದ ಹೊಟ್ಟೆಯ ಕಣ್ಣೀರಿಲ್ಲ
ನಿಶ್ಶಬ್ಧದಿ ಮುಂದೆ ಕೈ ನೀಡುತ್ತದೆ
ಅದು ಅನಾಥ ಮಗುವಲ್ಲ
ನಮ್ಮೊಳ ಅನಾಥತೆಯ ದರ್ಶನ.

ಶಾಪ ಹಾಕುವ ಮನಸ್ಸಿಲ್ಲ
ಧರಣಿ ಕೂರುವ ಹಠವಿಲ್ಲ
ಸತ್ಯ ಬಿಡುವ ಕನಸಿಲ್ಲ
ಸೌಧದ ಎದುರು ಕೈ ನೀಡುತ್ತದೆ
ಅದು ಅನಾಥ ಮಗುವಲ್ಲ
ನಮ್ಮೊಳ ಸಂಕುಚಿತತೆಯ ಪ್ರದರ್ಶನ

ಹರಿದ ಬಟ್ಟೆಯೊಳು ನಿಲ್ಲುತ್ತದೆ
ಜಡಿ ಮಳೆಯಲಿ ತೋಯುತ್ತದೆ
ಕಸವನ್ನೆತ್ತಿ ಓಡುತ್ತದೆ
ಬಟ್ಟೆಗಾಗಿ ಬೇಡಲಿಲ್ಲ
ಕೈ ತೊಳೆಯ ಕರೆಯಲಿಲ್ಲ
ಅದು ಅನಾಥ ಮಗುವಲ್ಲ
ನಮ್ಮೊಳ ಅನಾಥತೆಯ ದಿಗ್ದರ್ಶನ

ಮರ ನೋಡಿ ಫಲ ಕೊಟ್ಟಿತು
ಗಾಳಿ ತಾ ಉಸಿರು ಕೊಟ್ಟಿತು
ಜಲ ತನ್ನ ಸ್ನೇಹ ನೀಡಿತು
ಬದುಕು ಕೊಡುವ ಜನ ಮಾತ್ರ
ತಮ್ಮೊಳಗೆ ಕಳೆದು ಹೋದರು
ಅದು ಅನಾಥ ಮಗುವಲ್ಲ
ನಮ್ಮೊಳ ಅನಾಥತೆಯ ಬಂಧನ.

- ತೊರೆನೂರು ಸುಕುಮಾರ್, ಚೆರಿಯಪರಂಬು



# ನಿಜಕೂ ಬೆಚ್ಚಿದ್ದು ಯಾರು?!



'ಹಾಯಾದ ಈ ಸಂಜೆ
ಆನಂದ ತುಂಬಿರಲು...!
ಸ್ಫೋಟದ ಸದ್ದಾಗಿ
ಕ್ಷಣಗಳೂ ಉರುಳಿರಲಿಲ್ಲ
ಒತ್ತಿನಲ್ಲಿರುವ ಪಬ್‌ನ
ರಾತ್ರಿಯ ಮಂದ ಬೆಳಕಿನಲಿ
ಬಿಯರು ಹೀರುತ್ತಿದ್ದವರು ಗುನುಗಿದ್ದು ಹೀಗೆ !

'ದೇವರ ಆಟ ಬಲ್ಲವರಾರು
ಆತನ ಇದಿರು ನಿಲ್ಲುವರಾರು
ಹೇಳದೆ ಸುಖವಾ ತರುವಾ
ಕೇಳದೆ ದುಃಖವ ತರುವಾ....'
ಬಾನುಲಿಯಲಿ ಗೀತೆಯೂ ತೇಲಿಬಂದಿತು
ಡಿಸ್ಕೋ ಥೆಕ್‌ಗಳಲ್ಲಿ ತೆರೆದೆದೆಯ ನರ್ತನವೂ
ಎಗ್ಗಿಲ್ಲದೇ ಮುಂದುವರಿದಿತ್ತು!

ಚೆಲ್ಲಿದ ರಕ್ತದೋಕುಳಿ
ಕೈಕಾಲು ಚೆಲ್ಲಾಪಿಲ್ಲಿ
ನಡುವೆ ಗಟ್ಟಿ ಹೃದಯಗಳ
ಮೋಜು ನಡೆದೇ ಇತ್ತು
ಯಾರಿಗೇನಾದರೇನಂತೆ
ನಮಗಾಗಿಲ್ಲ ತಾನೇ?!
ಕಂಡಿರಾ? ಇದು ಮಾಯಾನಗರಿಯ ಬೆಡಗು

ಇನಿತೂ ಭಯದ ಸೋಂಕಿಲ್ಲದೇ ಇರುಳು ಕಳೆದಿತ್ತು
ಬೆಳಗಾಗುತ್ತಿದ್ದಂತೆ
'ಪಪ್ಪಾ ನಾನು ಸ್ಕೂಲ್‌ಗೆ ಹೋಗ್ತೀನಿ
ಆದ್ರೆ ನಿತಿನ್ ಇವತ್ತು ಬರಲ್ಲಾ, ಏಕೆ ಗೊತ್ತಾ?!
ಅವನಿಗೆ ಬಾಂಬ್ ಅಂದ್ರೆ ಹೆದರಿಕೆ!!'
ಉಲಿದಿದ್ದ ಆರು ವರ್ಷದ ಮಗರಾಯ
ತಾನೇನೋ ಮಹಾಧೀರ ಎಂಬಂತೆ!

ಹೆಂಡತಿಯದೂ ಅಷ್ಟೇ,
'ಏನಾದ್ರೆ ಏನಂತೆ, ತಿಂಗಳ ಕೊನೆಯಾಯ್ತು
ಅಕ್ಕಿಗೀಗಲೇ ಕೆ.ಜಿ.ಗೆ ಮೂವತ್ತು,
ನಾಳೆ ಕೇಬಲ್‌ನವನೂ ಬರ್‍ತಾನೆ
ಎಷ್ಟು ತರುತ್ತೀಯ ಇವತ್ತು?!'
ಅನ್ನೋ ಪ್ರಶ್ನೆ
ಏನೇ ಆದ್ರೂ ಜೀವನ ನಡೀಬೇಕು ತಾನೇ?!

ಮಡಿಕೇರಿಯಲಿ, ಸುದ್ದಿ ತಿಳಿದ ಅಮ್ಮ ಮಾತ್ರ
'ಸಾಕಿನ್ನು ಬೆಂಗಳೂರು;
ಕಟ್ಟಿಕೊಂಡವಳು, ಮಗನೊಂದಿಗೆ
ಕೂಡಲೇ ಬರಬಾರದೆ
ಇರುವ ಐದೆಕರೆ ಕಾಫಿ ತೋಟ ನೋಡಿಕೊಳ್ಳಬಾರದೆ?!
ಎಂದಾಗ ಮೂಡಿತ್ತು ಪ್ರಶ್ನೆ
'ಸ್ಫೋಟಕ್ಕೆ ನಿಜಕ್ಕೂ ಬೆಚ್ಚಿದ್ದು ಯಾರು?!'

- ದಿನೇಶ್ ಕೆ. ಕಾರ್ಯಪ್ಪ, ಮಡಿಕೇರಿ

# ಕಣ್‌ಜಾರದ ಕಂಬನಿ



ಮಧುರೆಯೂ ಮೃತ್ತಿಕೆಯ ಮೇಲೆ
ನೀ ಹೆಜ್ಜೆಯೂರಿದಾಗ
ನಾ ಮೆತ್ತಗೆ ಮೆತ್ತಗಾಗಿದ್ದೆ....
ಯಮುನಾ ತೀರದಿ
ನೀ ಊದಿದ ಕೊಳಲ ಗಾನಕೆ
ನಾ ನಕ್ಕು ನಲಿವಾಗಿದ್ದೆ....
ವೃಂದಾವನದಿ ನೀ
ಪ್ರೇಮಪ್ರಣತೆ ಹಚ್ಚಿದಾಗ
ನಾ ಬೆಚ್ಚಗೆ ಬೆಳಗಿದ್ದೆ...
ಹೊರಳಿದಾಚೆಗೆಲ್ಲ
ನೀ ಕುಡಿನೋಟ ಬೀರಿದಾಗ
ನಾ ಪಕಳೆ ತೆರೆದು
ಅಲರಾಗಿ ಅರಳಿದ್ದೆ.
ನನ್ನೊಡಲಾಳದ ಲತೆಯಲಿ
ನೀ ಹೊಸದಾಗಿ ದಾಂಗುಡಿಸಿದ್ದೆ...
ನೀ ಮೈಮರೆತು ಕುಣಿದಾಗ
ನಾ ಮಿಸುಕಾಡಿ ಮಿಸುಗಿದ್ದೆ....
ಕೃಷ್ಣಾ...
ನೀ ನಕ್ಕ... ನೀ ನಡೆದ ಹಾದಿಯಲಿ
ನಾನೂ ನಡೆದೆ
ನೀ ಮುಂದೆ... ಮುಂದೆ....
ನಾ ನಿನ್ನ ಹಿಂದಿಂದೆ..
ಮರೆತು ಮುಂದಡಿಯಿಡುವ ಮುನ್ನ
ಮುಂದಲೆಯನ್ನೊಮ್ಮೆ ನೇವರಿಸಿ ಮುದ್ದಿಸು
ರಾಧೆಯೊಳಗೂ ಮಾಯದ ನೋವಿದೆ
ನೋವಿನಂಚಲಿ ಮಾಸದ ಪ್ರೀತಿಯಿದೆ.....

- ರಮ್ಯ ಕೆ.ಜಿ., ಮೂರ್ನಾಡು

# ಅಣ್ಣ, ಅಣ್ಣಾ, ಮತ್ತು ನನ್ನಣ್ಣ



ಅಣ್ಣಾ....
ಬೆಟ್ಟ-ಸಮುದ್ರ,
ಸೂರ್ಯ-ಚರ್ಮ,
ಬೆವರು-ಮೋಡಗಳಿಗಿದ್ದಂತೆ
ನನಗೂ-ನಿನಗೂ ಕಾವ್ಯ ಸಂಬಂಧವಿಲ್ಲ
ನಾಲಗೆಯ ಮೇಲಿಟ್ಟ ತರ್ಕಕ್ಕೆ ಹುತ್ತದ ಹಿಡಿಮಣ್ಣಷ್ಟೂ ರುಚಿಯಿಲ್ಲ.

ಬಯಲ ಒಂಟಿ ಒಣಕೊರಡಿನಂಥ ದೇಹದಾಲಯದಲ್ಲಿ
ಲಿಂಗವಿರದ ಖಾಲಿಜೋಳಿಗೆ ಹೊತ್ತ ಜಂಗಮ ನಾನು

ಅಕ್ಕಾ...
ಗಿರಿಗಹ್ವರಗಳ ಅಲೆದು
ಕಾಡುಕೋಳಿಗಳ ಹಾಡುಕೇಳ್ವೆನೆಂಬುದು ಖರೆ.
ಹೆಬ್ಬೆರಳ ಹೋಲುವ ಸೌದೆ-ಅಣಬೆ-ಕಣಿಲೆಗಳ ಹೊರತು
ಮತ್ತೇನನ್ನೂ ಕೇಳಲಾರೆ, ಬೇರೇನನ್ನೂ ಹುಡುಕಲಾರೆ!
ಜಠರ-ಕರುಳ ಕೂಸುಗಳಿಗುಣಿಸಿ ನಿದ್ರಿಸಲು ಬಿಡಬೇಕು;
ಜಂತುಹುಳುಗಳ ರಾಗಕ್ಕೆ ಹೊಸದೊಂದು ಮೀಮಾಂಸೆ ಬರೆಯಬೇಕು.

ಅಣ್ಣಾ....
ಅಜ್ಜ ಹೋದ ಮೇಲೆ ಕಜ್ಜಿ ಹಿಡಿದ ಮಣ್ಣಿಗೆ
ಮುಲಾಮು ಹಚ್ಚಿದಷ್ಟೂ ಕೀವು ಜಾಸ್ತಿ
ನಿಂತಿದ್ದೀಯೆ ಹೀಗೆ-ಕಾಲ್ಬೆರಳ ಸಂದುಗಳಲ್ಲಿ ಬ್ರಯೋಫಿಲಂ ಬೇರಿಳಿಸಿ;
ನಾಳೆ ಪಾತಾಳಗಳ ಕೊರೆಕೊರೆದು
ಅನಾದಿ ಕೊತಕೊತ ಲಾವಾಗಳ ತಣ್ಣಗಾಗಿಸಲಿ.

ಸೂರ್ಯ, ಪಾಪಿ, ಸೊರಗಿದ್ದಾನೆ-ಅವ್ವನಂತೆ;
ನೆಲದ ನಡುನೆತ್ತಿಯ ಕಟಕಟೆಯ ಮೇಲೆ-
ತನ್ನ ತಾ ದಹಿಸಿ ದಯಾಮರಣದ ಧ್ಯಾನದಲ್ಲಿ

ಡಿಜಿಟಲ್ ಮಿಂಚು ನಿನ್ನ ಮೈಮೇಲೆ
ಮೋಡವಿದ್ದರೂ ನಾವಿದ್ದೇವೆ ಇಲ್ಲಿ-
ಒಡೆದ ಹಿಮ್ಮಡಿಯಂಥ ನೆಲವ ಬಿಗಿದು!

ಗಾಳಿ ಬೆಳಕಿರುವವರೆಗೆ
ಘೋಷಗಳು, ಬಾವುಟಗಳು
ಹೊಟ್ಟೆಗೆ-ಒಂದು ಹಿಡಿ ತುತ್ತಿಗೆ...

ನನ್ನಣ್ಣಾ...
ಹಸಿತೈತೆ ಒಸಿ ಮುದ್ದೆ ಕೊಡು
ಉಂಡು ಉಂಟ್ಕಳನಾ...!!

- ಕಾಜೂರು ಸತೀಶ್, ಕಲಿಕೆ



# ಕತ್ತಲು

ಎಲ್ಲೆಲ್ಲೂ ಕತ್ತಲು ತುಂಬಿರುವಾಗ
ನಾ ಬೆಳಕಿನ ಕವನ
ಹೇಗೆ ಬರೆಯಲಿ?
ಬೆಳಕಿನ ಸುಖ ಗೊತ್ತಿಲ್ಲ
ಬಾಲ್ಯದಲ್ಲಿ ಅಗ್ನಿಕುಂಡ
ಯೌವ್ವನದಲ್ಲಿ ಕಾಳ್ಗಿಚ್ಚು
ಎಲ್ಲಿ ನೋಡಿದರೂ
ಅಗ್ನಿಯದೇ ತಾಂಡವ
ಹಣತೆಯ ಬೆಳಕಲ್ಲಿ
ಹಣೆ ಸವರುವವರಿಲ್ಲ
ನಂದಾದೀಪದ ಬೆಳಕಲ್ಲಿ
ಮುತ್ತಿಡುವವರಿಲ್ಲ
ಬಿಂದು ಪ್ರೇಮಕ್ಕಾಗಿ
ಕೈಯೊಡ್ಡಿ ನಿಂತಾಗ
ಬೊಗಸೆ ತುಂಬ ತುಂಬಿದ್ದು
ನಿಗಿ ನಿಗಿ ಕೆಂಡ
ಎಲ್ಲಿ ಕಾಲಿಟ್ಟರೂ
ಸುಡು ಸುಡು ಬೆಂಕಿ
ಹೆಣ್ಣಾಗಿದ್ದಕ್ಕೆ ಸಾವಿರಾರು
ಅಗ್ನಿದಿವ್ಯಗಳಿಗೆ
ಬಲಿಯಾಗಿದ್ದೇನೆ
ಬೆಂಕಿಯನ್ನೇ ಕುಡಿದು
ಧಗಧಗಿಸಿದ್ದೇನೆ
ಬೆಳಕಿನ ಕವನ
ಹೇಗೆ ಬರೆಯಲಿ?
ಏಕೆ ಬರೆಯಲಿ...?

- ವಿ.ಎನ್. ರಂಜಿತ, ಕೆದಮುಳ್ಳೂರು

# ನಿರೀಕ್ಷೆಯಲ್ಲಿ....



ಆಗಸ ತುಂಬಿ ನೀರವ ಮೌನ
ಅಲ್ಲಲ್ಲಿ ಚದುರಿದ ಪುಟ್ಟ-ಪುಟ್ಟ ನಕ್ಷತ್ರಗಳು
ಬಾನ ತುಂಬ ಹರಡಿ
ಚಿತ್ತಾರ ಮೂಡಿಸಿವೆ.

ಅಂತರವಿದೆ ನಿರೀಕ್ಷೆಯಲ್ಲಿ, ಕನಸುಗಳಲ್ಲಿ
ಒಲ್ಲದ ಮನಸ್ಸಿನ ಒಗ್ಗದ ಏಳಿಗೆಗಳಲ್ಲಿ
ನೋಟದಲ್ಲಿ ಅಂತರವಿದೆ
ಎದೆ ಭಾವಗಳಲ್ಲಿ
ಅನುರಾಗವಿದೆ
ಬಯಸದೆ ಬಂದ ಬಯಕೆ
ಹಿಂತಿರುಗಿ ನೋಡಿದೆ
ನಡೆದು ಬಂದ ಹಾದಿಯು
ಕರಿನೆರಳು ಹಿಂಬಾಲಿಸುತ್ತಿವೆ

ಮಾತನಲ್ಲಿದೆ ದಿನ ಕಳವಳ ಕಸಿವಿಸಿ
ಕದಡಿದ ಮನಸ್ಸಿಗೆ ನಿನ್ನೆಗಳ ಬಯಕೆ
ಇಂದಿನವು ನಾಳಿನವು ಬರೀ ನಶ್ವರ
ಬೇಗೆಯ ಬಿಸಿಲಲಿ ತಂಪನೆರೆದ ಪ್ರೀತಿ
ವಸಂತನ ಆಗಮನವಾದರೂ ಇನ್ನು ಬಿರು ಬಿಸಿಲು

ಎದೆ ಭಾರವಿದೆ ಆಯ್ಕೆಯಲ್ಲಿ
ಗೊಂದಲ, ನೋವು, ಕನಸುಗಳಲ್ಲಿ ಚಡಪಡಿಕೆ
ಕಂಬನಿಯ ಕೋಡಿಯಲ್ಲಿ ತೋಯ್ದು ಹೋಗುತ್ತಲಿದೆ ಎದೆ.

- ದಿವ್ಯಾ ಎಂ.ಎಂ., ಮಡಿಕೇರಿ

# ಕದಡಿದ ಮನಸ್ಸು

ಯಾಕೋ ಏನೋ ಈ ಜೀವನ ನೋವಿನ
ಮಡಿಲಲ್ಲಿ ತೇಲಿ ಹೋಯಿತೋ
ಬದುಕೆಂಬ ಈ ಬಾಳ ಬಂಡಿಯಲ್ಲಿ
ಮನದ ಸಿಹಿ ಕನಸು ಕರಗಿ ಹೋಯಿತು||

ಚಿಗುರಿದ ಬಳ್ಳಿಯಂತಾಯಿತೆಂದು
ಮನದಲ್ಲಿ ಮಿಡಿಯಿತು ಕಾಂತಿಯ ಬಿಂಬ
ಒಡನೆಯೇ ಸುಳಿಯಿತೊಂದು
ಯಾವುದೇ ನೆಗಸದ ಕಹಿಯ ರೂಪ||

ಮುದುಡಿದ ಭಾವನೆಗಳ ತೋಡಿಕೊಳ್ಳಲು
ಮಾತೆಯ ಮಡಿಲಿನ ಆಸರೆ
ಪಿಸುಮಾತಿನ ಸವಿ ಜೇನಿನ
ಕನಸು ಕನಸಾಗೇ ಉಳಿದ ಜೀವನ

ಛಲ ಬಿಡಿದ ಮನದ ಆಸೆಯ ಹಾದಿಯಲ್ಲಿ
ಮಿಂಚಿನಂತೆ ಹಾದು ಬಂದ ದಾರಿಯಲ್ಲಿ
ಸೇರಿಕೊಂಡೆ ಹಾಲು ಸಕ್ಕರೆಯಂತೆ
ಈ ಜೀವನ ಪಾವನವಾಗುವುದೇ?

- ಕೃಷ್ಣವೇಣಿ ಪ್ರಸಾದ ಮುಳಿಯ, ಮಡಿಕೇರಿ



# ಯೋಧ

ಕಣ್ಣು ಮಂಜಾಯಿತು
ಮುಂಜಾನೆ ಮುಸ್ಸಂಜೆಯಾಯಿತು

ದಿನ ಉರುಳಿತು
ಪ್ರತಿ ಕ್ಷಣವೂ ಆತಂಕ ಮನೆ ಮಾಡಿತು

ಆದರೂ ಹೆಮ್ಮೆಯೆನಿಸಿದೆ
ವೀರಯೋಧನ ತಾಯಲ್ಲವೇ ನಾ

ಗರ್ಭದಲ್ಲೇ ಕಾದೆ ನನ್ನ ಕಂದ ನಿನ್ನ
ಗಡಿಯಾಚೆ ಕಾಯೋ ಕಂದ ಭಾರತಾಂಭೆಯನ್ನ,

ಮುಪ್ಪಿನಲ್ಲೂ ಕಾಡಾನೆಗೆ ಒಂಟಿತನ
ಪಡೆದ ನಾ ವೀರಯೋಧನ ತಾಯ್ತನ

ನೀ ಬರೋ ದಿನವೇ ಹಬ್ಬ ಹರಿದಿನ
ಬಡಿದೆಬ್ಬಿಸು ಪ್ರತಿಯೊಬ್ಬ ಯುವಕನ ವೀರತನ

ಹೊರಗೋಡಿಸು ಎಲ್ಲರಲ್ಲಿನ ತನ್ನತನ
ಮುಡಿಪಾಗಿಡು ದೇಶ ತಾಯೇ ಈ ಜೀವನ

ಕರುಣಿಸು ದೇವಾ ಇಂತಹ ಸೌಭಾಗ್ಯನಾ
ಪ್ರತಿ ಜನುಮದಲ್ಲೂ ವೀರಯೋಧನ ತಾಯಾಗುವೆ ನಾ.

- ಕುಯ್ಯಮುಡಿ ಹೇಮಾ ವಸಂತ್, ಮಡಿಕೇರಿ

# ನಿಟ್ಟುಸಿರು



ಮಾನ್ಯರೇ, ಬಂಧುಗಳೇ...
ಎಂದು ಕರೆದು
ಬಿಗಿದಪ್ಪಿ, ಕಾಲಿಗೆರಗಿ
ಅಡ್ಡ ಬಿದ್ದಾಗ ಆತ
ಉಬ್ಬಿ ಹೋಗಿ
ಮತದಾರ ಪ್ರಭುವಾದ!

ಸೂರು ಕಟ್ಟಿಕೊಡುತ್ತೇವೆ
ಊರು ಬೆಳಗಿಸಿ, ನೀರು ಹರಿಸುತ್ತೇವೆ
ಮನೆ ಮನೆಗಳಿಗೆಲ್ಲಾ ರಾಜಮಾರ್ಗ
ಭರವಸೆಯ ಹೊಳೆ ಹರಿಸಿ, ತಲೆಸವರಿ
ನೋಟು; ಕ್ವಾಟರ್ ಕೊಟ್ಟಾಗ
ಪ್ರಭು ಭ್ರಮೆಯಲ್ಲಿ ತೇಲಿಹೋದ!

ತಾನು ವೋಟು ನೀಡ್ದೋನು
ಗೆದ್ದುಕೊಂಡಾಗ, ಕೊಂಡಾಡಿ; ಕುಣಿದಾಡಿ
ಮೈ, ಬಾಯಿ ನೋಯ್ಸಿಕೊಂಡು
ತನ್ನವರಲ್ಲಿ, ಕಂಡ ಕಂಡವರಲ್ಲಿ
ನಮ್ಮೂರು ಏನೇನೋ ಆಗುತ್ತದೆಯೆಂದು
ಕನಸ್ಸು ಕಟ್ಟಿ ಹಾಡಿದ!

ಗೆದ್ದೋನು ಗುದ್ದಾಡಿ, ಬಡಿದಾಡಿ
ಮಂತ್ರಿಯು ಆಗಿ ಮೆರೆದಾಗ
'ಮತದಾರ ಪ್ರಭು'ವನ್ನು ಮರೆತು
ದೋಚುವಲ್ಲಿಯೇ ಮುಳುಗಿದಾಗ
'ಅವನ್ಮನೆ ಹಾಳಾಗ್ಹೋಗ್ಲಿ'ಂತಾ
ಪ್ರಭು ನಿಟ್ಟುಸಿರು ಬಿಟ್ಕೊಂಡ!

- ಮಂಜುಗೋಪಿನಾಥನ್, ಹೊದ್ದೂರು

# ಬಿಕರಿಗಿದೆ ಈ ನೆಲದ ಬದುಕು

**ಈ** ನೆಲದಲ್ಲಿ ಎಲ್ಲವೂ ಬಿಕರಿಗಿದೆ
ಆಟಗಾರನೊಬ್ಬನ ಪ್ರತಿ ಕ್ಷಣಗಳು,
ತಾರೆಯೊಬ್ಬಳ ಒಳವಸ್ತ್ರಗಳು
ಖಾದಿ ಪುಡಾರಿಯೊಬ್ಬನ
ಹುಸಿ ಬೊಗಸೆ ಭರವಸೆಗಳು
ಇವುಗಳ ಜೊತೆಗೆ ಅವಿತು
ಪದೇ ಪದೇ ಇಣುಕುವ
ರೈತನೊಬ್ಬನ ಕಮಟು ಬೀರುವ
ಬೆವರು, ಆತ್ಮಸ್ಥೈರ್ಯ, ಸ್ವಾಭಿಮಾನ
ಚಕ್ಕಳ ಕಾಣಿಸುವಂತೆ ಬೆತ್ತಲಾಗುವ
ಆತನ ದೇಹ ಎಲ್ಲವೂ ಕೂಡ.

ಈ ನೆಲದಲ್ಲಿ ಎಲ್ಲವೂ ಬಿಕರಿಗಿದೆ
ಇಕ್ಕೆಲಗಳಲ್ಲಿ ಮಾರುವ
ಜನಿವಾರ, ರುದ್ರಾಕ್ಷಿ, ರಂಗುರಂಗಿನ ಹರಳುಗಳು, ವಿಭೂತಿ ಪಟ್ಟೆಗಳು,
ಡೊಳ್ಳೊಟ್ಟೆ ಹೊತ್ತ ದೇಹದ
ಬಾಯಿಂದ ಹೊರಡುವ ಮಣಮಣ ಮಂತ್ರಗಳು
ಯಾರನ್ನು ಮುಟ್ಟಿಸಿಕೊಳ್ಳದ
ಊರಿನಾಚೆಯ ಮನುಷ್ಯರು
ಬಾಗಿಲ ಹೊರಗಿಂದ ಇಣುಕಿ ಇಣುಕಿ
ಕರಿಕಲ್ಲನ್ನು ದೃಷ್ಟಿಸುವ ಚಿತ್ರಗಳು,
ವಿಚಿತ್ರಗಳು ಎಲ್ಲವೂ ಕೂಡ.

ಈ ನೆಲದಲ್ಲಿ ಎಲ್ಲವೂ ಬಿಕರಿಗಿದೆ
ಐಷಾರಾಮಿಯೊಬ್ಬನ ಮತ್ತೊಂದು ಕಾರು,
ಆತನ ಹೊಸ ಸರಂಜಾಮುಗಳಿಗಾಗಿ
ಹೊಸದಂತಿರುವ ಹಳೆಯ ಸರಕುಗಳು
ಬಿಡಿಗಾಸಿಗೆ ಖರೀದಿ ಮಾಡಿದ
ದವಸ ಧಾನ್ಯಗಳು ಎಸಿ ಮಾಲ್‌ಗಳಲ್ಲಿ
ಥಳಿಗೆಯೊಳಗಾಗಿ ದುಬಾರಿಗೆ ಬಿಕರಿಯಾಗುತ್ತದೆ

ಈ ನೆಲದಲ್ಲಿ ಎಲ್ಲವೂ ಬಿಕರಿಗಿದೆ
ನೀವು, ನಿಮ್ಮವರು ಮತ್ತು ನಾನು
ನನ್ನ ಕವನದ ಪ್ರತಿ ಅಕ್ಷರಗಳು
ಎಲ್ಲವೂ, ಎಲ್ಲರೂ ಕೂಡ...
ಮುಂದೊಂದು ದಿನ ಹೇಳ ಹೆಸರಿಲ್ಲದೆ
ಬಿಕರಿಯಾಗಲು ಸಿದ್ಧರಿರಿ.

- ಮಣಜೂರು ಶಿವಕುಮಾರ್, ಸೋಮವಾರಪೇಟೆ



# ಅಂಕದ ಪರದೆ ಜಾರಿದಾಗ...



ಅಂಕದ ಪರದೆ ಜರಿದು
ನಾಟಕವೊಂದರ ಆರಂಭ
ಒಂದೊಂದಾಗಿ ದೃಶ್ಯಗಳು
ಸಾಲು-ಸಾಲು ಪಾತ್ರಗಳು
ಒಂದರಂತೆ ಮತ್ತೊಂದಿಲ್ಲ
ಎಲ್ಲವೂ ಪೂರ್ವ ನಿಯೋಜಿತ...
ಸಂಬಂಧಗಳ ತಳಕು-ಬಳಕು
ಗಂಡ-ಹೆಂಡಿರ ಸರಸ-ವಿರಸ
ಅಪ್ಪ-ಮಕ್ಕಳ ಪ್ರೀತಿ-ಭೀತಿ
ಅಮ್ಮ-ಮಕ್ಕಳ ಮಮತೆ-ಮಮಕಾರ
ಸ್ನೇಹಿತರ ಒಡನಾಟ, ವೈರಿಗಳ ಅಟ್ಟಹಾಸ
ಆಗೊಮ್ಮೆ, ಈಗೊಮ್ಮೆ ಅಲ್ಲೋಲ-ಕಲ್ಲೋಲ...
ನವರಸಗಳ ರಸಗವಳ
ಶೃಂಗಾರ ಲಹರಿ, ಆ ವೀರ ವದನ
ಕರುಣೆಯ ಕೋಡಿ, ಅದ್ಭುತ-ಅದಮ್ಯ
ಸ್ವಲ್ಪ ಹಾಸ್ಯ, ಭಯದ ನೆರಳು
ಅಲ್ಲಲ್ಲಿ ಭೀಬತ್ಸ, ರೌದ್ರತರ್ನನ
ಮಾನಕೆ ಮುದ ನೀಡುವ ಶಾಂತತೆ...
ತಾಳ-ಮೇಳಗಳ ತಾಕಲಾಟ
ಜಗಳ-ಬೈಗುಳ, ಜೊತೆಗಿಷ್ಟು ಹೊಡೆದಾಟ
ಮಾತಿನ ಮೋಡಿ ಹಾಡಿನ ದಾಟಿ
ಕುಣಿತ-ತುಡಿತ-ಮಿಡಿತ...
ಹುಟ್ಟು-ಸಾವು, ಮದುವೆ-ಮುಂಜಿ

ಅಧಿಕಾರ-ಅಂತಸ್ತು, ಕೊಲೆ-ಸುಲಿಗೆ
ಚಾಕು ಚೂರಿ, ದೊಂಬಿ ಬಾಂಬು
ನೋವು-ನಲಿವು ಸುಖ-ದುಃಖ
ಇನ್ನೂ... ಇನ್ನೂ... ದೃಶ್ಯಗಳೆಲ್ಲ ಮುಗಿದು
ಪಾತ್ರದಾರಿಗಳ ಬಣ್ಣದ ತೊಳೆತ
ಉಡುಪುಗಳ ಬದಲಾವಣೆ ಅಂಕದ ಪರದೆ ಸರಿದು
ಆ ನಾಟಕದ ಮುಕ್ತಾಯ
ಇನ್ನೊಂದರ ಆರಂಭಕೆ ಸಿದ್ಧತೆ
ಸೋಜಿಗ... ಸೋಜಿಗ... ಎಲ್ಲವೂ ಸೋಜಿಗ.

- ಎಚ್.ಕೆ. ತಿಲಗಾರ್, ಕುಶಾಲನಗರ



# ಮಳೆಬಿಲ್ಲ ರುಜು

ಮೇಘರಾಜನು ಚಿತ್ರ
ಬರೆಯುತಿಹ ಮಳೆಯ
ಕುಂಚದಲ್ಲಿ
ಧರೆಯೊಡಲು ಚಿತ್ತಾರವಾಗಿದೆ
ಆತನ ಕುಶಲಕರಗಳಲ್ಲಿ
ವ್ಯೋಮದೊಡಲ
ಮಿಂಚಲದ್ದಿ ಆತ
ಹೊಳಪ ನೀಡಿಬಿಟ್ಟ
ತಂಗಾಳಿಯು ಬೀಸಿ ಬೀಸಿ
ಅದಕೆ ರಮ್ಯತೆಯ ತಂದುಕೊಟ್ಟ
ಗದ್ದೆ ಬಯಲಂಗಳದಿ
ನೀರಗುಳ್ಳೆಗಳ ರನ್ನದೀಪ ಮಾಲೆ
ಸೂರ್ಯಕಿರಣ ತಾಗಿಬಿಟ್ಟಿತೋ
ಮೂಡುವುದು ಸಪ್ತವರ್ಣಲೀಲೆ
ನಿಲ್ಲದೊಂದು ಕ್ಷಣ
ಸಾಗಿಬಿಡುವುದದರ ಅನುಕ್ಷಣದ
ಧಾವಂತ
ಸಾಗುತಲೆ ಬರೆವ
ಚೆಲುವ ಚಿತ್ರವದು
ಮೇಘಶ್ಯಾಮನದೆ ತಂತ್ರ
ಆಗಸದ ನೀಲಿಯಲಿ
ಮೋಡಗಳ ಮದ್ದಾನೆ
ಸಾಗುತಿವೆ ಹಿಂಡುಹಿಂಡು
ಎಲ್ಲಿ ಎರಗಿ ಧಾಳಿ ಮಾಡುವುದೊ
ಮನ ಅಳುಕುತ್ತಿದೆ
ಕಂಡು ಕಂಡು

ಪರ್ವತಘನಸ್ತನಗಳಲಿ
ಉಕ್ಕಿ ಹರಿದಿದೆ ಕ್ಷೀರಾಮೃತಧಾರೆ
ಹನಿಹನಿಯ ಪ್ರೋಕ್ಷಿಸಿ
ಅರ್ಚನೆಗೈಯುತಿದೆ
ಶಿವನ ಹೃದಯವಾಯ್ತು ಸೂರೆ.
ಮುಕ್ತವಾದ ನೀರಮಗು
ಧಾವಿಸುತಿದೆ ಅಲ್ಲಿ ಇಲ್ಲಿ ಎಲ್ಲ
ಬಾಚಿಕೊಳ್ಳುವ ತವಕದಲಿ
ಸೃಷ್ಟಿಸಿರಿಯನೆಲ್ಲ
ತೃಷೆಯೇರಿದೆ ಭುವಿಯೊಡಲಿಗೆ
ಹಿಂಗಿಸಬೇಕಿದೆ ದಾಹ
ತಡವಾಗದು ಓಡಬೇಕು
ಕರೆಯುತಿದೆ ಕರುಳ ಮೋಹ
ಹಿಗ್ಗುತಿದೆ ಬೆಂದು ಬಡವಾದ
ಜಲಪಾತದ ಬದಲು
ಜನ್ಮ ನೀಡಿ ನರ್ತಿಸುತಿದೆ
ಸಾವಿರ ಕನಸುಗಳಿಗೆ
ಹೊನಲು
ಭೂಮ್ಯಾಕಾಶವ ಬೆಸೆದಿದೆ
ಮಳೆಗಾಜಿನ ಹಗ್ಗ
ಗುರುಲಘುಗಳ
ಫಲದೂಟೆಯ ಬರೆಯುತಿದೆ ಕಗ್ಗ
ಚಿತ್ರಕಾರನ ಕೈ ಸೋಲದಿದೆ
ಎಷ್ಟು ಬರೆದರೂ ಚಿತ್ರ
ಅತ್ತ ಇತ್ತ ಎತ್ತಲೆಲ್ಲ ಬರೆದು
ಮಳೆಬಿಲ್ಲ ಸಹಿ ಹಾಕಿಬಿಟ್ಟ!

- ಶ್ರೀಮತಿ ಶಿವದೇವಿ ಅವನೀಶ್ಚಂದ್ರ

# ಅಯ್ಯೋ ನನ್ನೂರೇ...?

ಅಳಿಯ ತೊಡಗಿದೆ ಭವ್ಯ ಕೊಡಗಿನ ದಿವ್ಯ ಹಸಿರಿನ
ಹೊನ್ನೆ ಬೀಟೆ ಗಂಧ ತೇಗದ ಮರಗಳು
ಬೆತ್ತಲಾಗಿವೆ ಭತ್ತದ ಗೆದ್ದಗಳವು ಪರಧಾಳಿಗೆ ಸಿಲುಕಿ
ಅನ್ನವಿಲ್ಲದೆ ಹಸಿದ ಹೊಟ್ಟೆಗಳಿಗೆ ಶುಂಠಿಯ ಜಣಜಣ

ನಮ್ಮ ನೆಲದ ಹಕ್ಕು ಕದಿಯುವ ಕುತಂತ್ರದಿ ರೂಪಿಸಿಹ ಕಾಯ್ದೆಗಳು
ತಿಳಿದಿಹರು ನಮ್ಮ ಶಾಂತಿಯ ನಮ್ಮ ದೌರ್ಬಲ್ಯವೆಂಬಂತೆ
ನಮ್ಮ ನೆಲದಲಿ ನೆರೆಯನಾಡಿಗೆ ವಿದ್ಯುತ್ ಹರಿವ ತಂತಿ ಸಾಲುಗಳು
ದುರಂತವಿದು ಊರು ನಮ್ಮದದು ಇರುವುದು ರಕ್ಷಿತಾರಣ್ಯದಲಿ

ರಸ್ತೆಗಳಿವೆ ಒಂದಷ್ಟು ಚಂದ್ರನ ಮೇಲ್ಮೈನಂತೆ, ದೂರದಿಂದಲೇ ಚಂದ
ಹೊಗಳಿದರಷ್ಟು ಮಂತ್ರಿವರ್ಯರು ಬಲು ಸುಂದರ ನಾಡದು ಕೊಡಗು
ಅದರಿಲ್ಲಿನ ಬದುಕು ಕಾಣಲೇ ಇಲ್ಲ, ಜಾಣ ಕುರುಡು ನಾವೇನೂ
ಕೇಳಲಿಲ್ಲ ಅವರೇನೇನೂ ಕೊಡಲಿಲ್ಲ ನಮಗೂ ಬೇಕಿಲ್ಲ.

ಬಾಯಿಯಲೆ ರೈಲು, ದೊಡ್ಡದೊಡ್ಡವರ ಹೆಲಿಕಾಪ್ಟರ್, ನಿಂತಲ್ಲೆ
ವಿಮಾನ ನಿಲ್ದಾಣ, ಕರ್ನಾಟಕದ ಕಾಶ್ಮೀರ, ಭಾರತದ ಸ್ವಿಟ್ಜರ್ ಲ್ಯಾಂಡ್
ಬೆರಗಾದೆವು ನಾವು, ಬಂದವರಿಂದ ಹಣ ಕೀಳುವುದೊಂದು ದಂಧೆ
ಅದೊಂದೇ ಆಸ್ತಿ ಆಡಳಿತ ಯಂತ್ರಕೆ ಊಟಕ್ಕಿಲ್ಲದ ಉಪ್ಪಿನಕಾಯಿ

ಇನ್ನಾದರೂ ಬದಲಾಗಬಹುದೇ ನಮ್ಮೂರು. ಛೇ ಹುಚ್ಚಿ ನನಗೆ
ಹೌದು, ಆದರೂ ಹುಚ್ಚೇ ಮಿಗಿಲು ಭ್ರಮೆಯಲ್ಲಾದರೂ ಕಾಣಬಹುದು
ಹಗಲಲ್ಲೂ ಇರುಳಲ್ಲೂ ಕನಸುಗಳು, ನನ್ನ ಜನರಲಿ ಮೂಡಿದರೆ
ಹೋರಾಟದ ಕಿಚ್ಚು ಮಕ್ಕಳು ಮುಂದೆ ಕಂಡುಕೊಂಡಾರು ಬದುಕು.

- ಕಿಗ್ಗಾಲು ಜಿ. ಹರೀಶ್, ಮೂರ್ನಾಡು

ಕೊಡವ ಭಾಷೆ



# ಪೊಣ್ಣ್

ಕಾವೇರಿರ ಸಂತಾನ ನೀನ್
ಸರಸ್ವತಿರ ರೂಪ ನೀನ್
ಲಕ್ಷ್ಮಿರ ವರದಾನ ನೀನ್
ಗಂಗೆರ ಪ್ರಸಾದ ನೀನ್
ತೇಂಜಿ ಬಾವ ಪೊಣ್ಣ್ ನೀನ್

ಅಪ್ಪ ಅಮ್ಮಂಗ್ ಕುಂಞಿಯಾಯಿ
ವಡಿಯಂಗ್ ಪೊಣ್ಣಾಯಿ
ಮಾವ ಮಾಯಿಕ್ ಮ್ಮೆಮಳಾಯಿ
ಮಕ್ಕಕ್ ಅವ್ವನಾಯಿ
ತೇಂಜಿ ಬಾವ ಪೊಣ್ಣ್ ನೀನ್

ಸಂಸಾರಕ್ ಕಣ್ಣಾಯ್ತ್
ಸಂಬಂಧಕ್ ತೋಣೆಯಾಯ್ತ್
ಸಮಾಜತ್ ಎಡೆಮೇಂಗಿತ್
ಸಂತೃಪ್ತಿಲ್ ಉಸಿರಾಡಿತ್
ತೇಂಜಿ ಬಾವ ಪೊಣ್ಣ್ ನೀನ್

ಸಂಸ್ಕೃತಿನ ಪೊತ್ತ್‌ವ
ಸಂತಾನಕ್ ಮೊಳಿಯಾನವ
ಐಶ್ವರ್ಯಕ್ ದೇವಿಯಾಯ್ತ್
ತೇಂಜಿ ಬಾವ ಪೊಣ್ಣ್ ನೀನ್

ನೇರ ನೆಲಚಿ ಗೊತ್ತಿಲ್ಲತವ
ಸುಖಂದೆಣ್ಣಾನ ಅರಿಯತವ
ಕಷ್ಟತೆ ಸುಖತ್‌ನ ಕಾಂಬವ
ನೈಪ್‌ಲೆ ನಾಳ್‌ನ ತೇಪವ
ತೇಂಜಿ ಬಾವ ಪೊಣ್ಣ್ ನೀನ್

ಸೃಷ್ಟಿ ಕಂಡ ದೇವ ನೀನ್
ಬದ್‌ಲೆಕ್ಕಲು ದಾಸಿ ನೀನ್
ತಾಳ್ಮೆ ತಂಪುರ ಗಾಳಿ ನೀನ್
ಪೊಂದೆಳೆರ ಪೂವ್ ನೀನ್
ತೇಂಜಿ ಬಾವ ಪೊಣ್ಣ್ ನೀನ್.

- ಚಾಮೇರ ದಿನೇಶ್, ಮಂಕ್ಯ



# ಎನ್ನಂಗ್ ಈ ಪೋರಾಟ್ !

ಬೋಡಿ ಬಂದದಲ್ಲ ಈ ಜನ್ಮ
ದಾರ್‌ಕ್ಕಾಯಿತೂ ಎಡ್‌ತದಲ್ಲ ಜನ್ಮ
ಅಂತಲ್ಲಿ...!
ಎಡೆಲೆನ್ನಂಗ್ ಕಳ್‌ಂದವ್ರೊ ಈ ಜನ್ಮ?

ಬಪ್ಪಕ ಕೊಂಡ ಬಂದದಲ್ಲ ಈ ಆಸ್ತಿ
ಪೋಪಕ ಕೊಂಡ ಪೋಪದೂ ಅಲ್ಲ ಆಸ್ತಿ
ಅನ್ನನಿಪ್ಪಕ....!
ಎಡೆಲೆನ್ನಂಗ್ ಮನ್‌ಷ್ಯಂಗ್ ಈ ದುರಾಸೆ?

ಬಪ್ಪಕ ಇಲ್ಲೆ ದಾರೂ ಕೂಟ್‌ಕ್
ಪೋಪಕ ದಾರಿಪ್ಪ ಕೂಟ್‌ಕ್
ಅನ್ನನುಳ್ಳಲ್ಲಿ...!
ಎಡೆಲೆನ್ನಂಗ್ ಬೋಂಡು ಈ ಕುರ್‌ಡ್ ಕೂಟ್?

ಆಸ್ತಿ-ಪಾಸ್ತಿ ಪಣಕಾಸ್ ಉಂಡ್
ಚಾಯಿ ಚಂದ ಬೋಂಡ್ಯದುಂಡ್
ಅನ್ನನಿಪ್ಪಕಾ...
ಎನ್ನಂಗಪ್ಪಾ ಈ ಕೇಡ್... ಕಿಚ್ಚ್?

ದೇವ ತಂದೋರ್ ಜನ್ಮ
ತಡಿರ ಸ್ವಾರ್ಥಕ್ಕಾಯಿತ್
||ಪುಟ್ಟ್-ಚಾವುರ ಎಡೆಲೆ
ಎನ್ನಂಗ್ ಈ ಪೋರಾಟ್???||

- ಅಕ್ಕಪಂಡ ಕುಸುಮ ಅಪ್ಪಣ್ಣ, ಮಡಿಕೇರಿ



# ರೈತಂಡ ಗೋೞ್

ಎನ್ನನೆ ಎಣ್ಣಡ್ ಎನ್ನನೆ ಎಣ್ಣಡ್...
ರೈತಂಡ ಗೋೞ್‌ನ
ಎನ್ನನೆ ಎಣ್ಣ್‌ನಕೊ ಅರಿಯ
ಪಣಕಾರ ದೊರೆಯ

ಬೆದ್‌ಲು ಮೞೆಲು ಬಂಡ್‌ಲು ನೈಚಿತ್
ಒರ್‌ಪ್ರುಡಿ ಕೂೞ್ ಕೆಲಕ್ ಇಲ್ಲತೆ
ನೆಮ್ಮದಿಲ್ ವರ್‌ಕ್ ಕಣ್ಣ್‌ಕ್ ಇಲ್ಲತೆ
ಪಡುವ ಕಷ್ಟತ್‌ನ ಕೇಪ ಜನ ಇಲ್ಲೆ
ಸುಖ ಎಂದು ರೈತಂಗ್ ಇಲ್ಲೆ
ಪಣಕಾರ ದೊರೆಯ ಅರಿವದ್ ಇಲ್ಲೆ

ನೈಚ ಒರ್ ಬೊೞೆ ಮೞೆಲ್ ಕಿಂಚಿತ್
ಬೆದ್‌ಲ್ ಒಣಂಗಿತ್ ಕಾಯಲತ್ ಎದ್ದಿತ್
ಪಸಲ್ ಕ್‌ಟ್ಟ್‌ನ ಸಮಯತ್
ಮಾರ್‌ವಕ್ ಕ್ರಯಕ್‌ಟ್ಟತೆ
ದಳ್ಳಾಳಿ ಚೌಕಾಸಿಲ್ ವ್ಯಾಪಾರ ಮಾಡುವಕ
ನೊಂದ ರೈತಂಡ ಗೋೞ್‌ನ ಕೇಪ ಜನ ಇಲ್ಲೆ

ಪಣಕಾರ ದೊರೆಯ ಅರಿವದ್ ಇಲ್ಲೆ
ರೈತಂಡ ಉದ್ಧಾರ ನಂಗಡ ಉದ್ಧಾರ
ಸುವರ್ಣ ಗ್ರಾಮ ಕೃಷಿ ನಂಗಡ ಯೋಜನೆ
ವೇದಿಕೆಲ್ ಕೇಪ ಕೂತ್ ಒಂದ್ ಮಾತ್ರ
ಸ್ವತಂತ್ರ ಬಂದಿತ್ ಅರ್‌ವತ್ತಂಜಿಕಾಲ ಆನಕೂ
ಆಯಿಲೆ ರೈತಂಡ ಉದ್ಧಾರ.

ಪಣಕಾರ ದೊರೆಯ ಪೊರದೇಶತ್ ಬೆಚ್ಚ
ಕೋಟಿಪಣ ವಾಪಾಸ್ ಬಂದಕ
ಆ ಪಣತ್ ಮಾಡಲು ರೈತನ ಉದ್ಧಾರ
ಇಲ್ಲತೆ ಮಾಡಲು ಬಡತನ.

ರೈತ ಬಂದಕ ಸಿರಿತನ
ಗಾಂಧೀಜಿ ಕಂಡ ರಾಮರಾಜ್ಯ ಸ್ವಪ್ನ
ಸತ್ಯ ಆಚೀಂದ್ ಕುಶಿ ಪಡಲು ನಂಗ
ಗಾಂಧೀಜಿರ ಆತ್ಮಕು ಶಾಂತಿ ಕ್‌ಟ್ಟ್‌ಚಿಂದ್
ಎಣ್ಣುವಲು ನಂಗ
ರೈತಂಡ ಗೋಳ್ ಇಪ್ಪಲ್ಲೆಂದ್ ಆಪ
ಸುಖತ್ ಬಾಳು ರೈತಂಗ ಎಲ್ಲ.

- ಇಟ್ಟೀರ ಕೆ. ರಾಜಪ್ಪ, ತೂಚಮೇಕೇರಿ

# ಕೊಡಗ್‌ರ ಮಳೆ

ಕುಂದ್ ಕೋವ್‌ರ ಕೊದಿ ನಾಡ್ |
ಪೆದ ಪೋಯಿತ್ ಇದ್ ಮಳೆನಾಡ್ |

ಮೇ ಆಖಿರಿ ಜೂನ್ ಎದ್‌ಪ್‌ಲ್
ಗಂಟ್ ಮೂಟೆ ಕಟ್ಟಿ ಬಪ್ಪ

ಕೊಡಗ್‌ರ ಬೆಂದು ತಂಡ್‌ಕುತ್ತಿ ಮಳೆಯಜ್ಜ ||
ಮೂಂದ್ ನಾಲ್ ತಿಂಗ ಇಲ್ಲಿ ಒಳ್‌ಂಜಿ
ಭೂದೇವಿಕ್ ನೀರಾಕುವ ಜೊರೋ ಪೊಜ್ಜಿ ||

ಬೇಲ್ ಉತ್ತಿತ್ ಬೊಳೆ ಎಡ್‌ಪ ಜನ
ಬಾಣ ನೋಟಿ ಕೈತೊಪ್ಪ ಅಯಿಂಡ ಮನ|

ಕಾವೇರಿ ಲಕ್ಷ್ಮಣ ಬಲಂಬೇರಿ ಕನಿಕೆ
ದುಂಬಿ ಪರಿವ ನಾಡಲ್ಲ ನಾಡ್‌ಕ್ ||

ಅಬ್ಬಿ ಇರ್ಪು ಮಲ್ಲಳ್ಳಿ ಚೇಲಾವರ
ಮಾಡುವ ನಾಡ್‌ನ ಸ್ವರ್ಗತ್‌ರ ಅವತಾರ||

ಬೋಜತ್‌ನ ನೋಟಿ ಪರನಾಡ್‌ಕಾರ
ಬೆಪ್ಪ ಬೆರಗಾಯಿ ಮೂಕ್‌ಲ್ ಬೆರ ||

ಸ್ವೆಟರ್ ಕೋಟ್ ಗಂಬೂಟ್ ಕಾಲ್‌ಕಾಯಿ
ನಡ್‌ಪ ಜನ ರಂಗ್‌ರಂಗ್‌ರ ಕೊಡೆಯಾಯಿ ||


ಎಲ್ಲಿಯೂ ಕಾಂಗತ ವಿಶೇಷತ್‌ರ ಬದ್‌ಕ್‌ಲ್ಲಿ
ಇಂಥ ಚಾಯಿ ಜಗತ್ ಕಾಂಗು ಎಲ್ಲಿ?||

ಕಾಲ ಕಾಲಕ್ಕ್ ಮಳೆ ಬೊಳೆ ತಪ್ಪ
ಮಲ್ಮ ಕುಂದ್'ರ ವಾಸಿ ಮಹಾದೇವಾ||

ಕುಡಿಪೊ ನೀರ್ ತಿಂಬ ಕೂಳ್'ಕ್
ಕೊರು ಇಲ್ಲತೆ ಪೊಲತುವಾ ಇಗ್ಗುತ್ತಪ್ಪ ||

ಕೈ ತೊತ್ತ್ ಬೋಡಿಯವಿ ಓ ಮಳೆದೇವಾ
ಕೊಡಗ್'ರ ಬೋಜ ಇನ್ನನೇ ಉಳಿಯಡ್
ಕೊಡಗ್'ರ ಕೇಳಿ ಲೋಕಕ್ಕೆ ಪರಿಯಡ್ ||

- ಕೊಂಗಿರಂಡ ದಮಯಂತಿ ಕುಶಾಲಪ್ಪ, ಮಡಿಕೇರಿ



# ಪೊಲೆ

ಪೊಲೆ ಎಣ್ಣ್‌ವದೆಲ್ಲಿ ಉಂಡ್
ಪೊಲೆರೊಳ್‌ಲೇ ನೀನ್ ಪುಟ್ಟಿಯ ಅಂದ್
ಪೊಲೆಕಂಡ ತಡಿಲೇ ಪುಟ್ಟಿ ಬಂದಿಯ ನೀನ್
ಪೊಲೆಂದೆಣ್ಣ್‌ವದೆಲ್ಲಿ ಉಂಡ್ ಎಣ್ಣ್ ನೀನ್

ಪೊಲೆ ಪೊಲೆಯದ್ ಎಡೆಮೇಂಗಿ ಬಂದ್ಯಾ
ಪೊಲೆ, ತಟ್ಟ್-ಮುಟ್ಟ್‌ಂದ್ ಎಂತ ಎಣ್ಣ್ಯ
ಇದ್‌ನರಿಯತೆ ನೀನಿಂದ್ ಪರ್‌ಂದಕ
ತೆಳಿಕು ಲೋಕಜನ ಇದ್ ಕೇಟಕ.

ಎಲ್‌ಂಬ್ ತಿರಿಕೆಕ್ ನುಗ್ಗಿ ನೀನಳ್‌ತಿತಿಲ್ಲಿಯಾ?
ಪೊಲೆ ಪೊಲೆಂದೆನ್ನಂಗ್ ನೀ ಓಡಿಕಳಿಪಿಯಾ?
ಎಲ್‌ಂಬ್ ಯರ್ಚಿ ತೋಲ್ ಚೋರೆ
ಎಲ್ಲ ನೀಡ ತಡಿಲೇ ಇಲ್ಲಿಯಾ?

ಊರ್ ಪೊಲೆನ ಮೇಂಜ ಪಂದಿನ
ಕರಿಮಾಡಿ ನೀನೆರಕ್‌ವಿಯ ಅದ್‌ಂಡ ಚೋದ್‌ನ
ಉಂಬ ತಿಂಬಾಗಿಲ್ಲತ ಈ ಪೊಲೆ
ಪೊಣ್ಣ್ ಜನ್ಮಕೆಲ್ಲಿಂಜಿ ಬಾತ್ ಮೋಳೆ

ಕೇರಿ ಕಣತರೆ ಕೂವತ ನೀರ್
ಅದ್ ನೋಟ್ ಎಲ್ಲಾಡೋ ಪಾಲ್
ನೀಡ ಕಣತರೆ ಕೂವತ ನೀರ್
ಅದಂಡ ಚೋದ್ ಬೋರೆ ಎನ್ನ್?

ಗುಡ್ಡತ್ ನೀರೊಕ್ಕಿ ಪೊಳೆಕ್ ಕೂಡ್‌ನಕ
ದೇವ ಮೀದಿ ನೀರ್ ಎನ್ನಾಕು ಅಕ್ಕ?
ಪೊಲೆದುಂಬ್‌ನ ತಡಿನೀರ್‌ನ ಪಾಂಗರ್‌ಂಜಿ ಅರ್‌ಚಿ
ಕುಡಿ ನೀನ್ ಚಾಯೋಡೆ ಕಾಚಿ ತಣ್‌ಚಿ.

– ಮುಲ್ಲೇಂಗಡ ರೇವತಿ ಪೂವಯ್ಯ, ವಿರಾಜಪೇಟೆ



ಬ್ಯಾರಿ ಭಾಷೆ ಕವನ

# ಉಮ್ಮ

ಒಲಿಂಬೊವು ತಿಂಜಲ್ ಪೊರ್ತುನಂಡೆ ನರಂಜಪೆತ್ತೊ ಉಮ್ಮನೀನ್
ನಂಡೊಮೇಲ್‌ಡೊ ಸೆಕ್ಕ್‌ಡೆಲ್ಲ ಕಲ್ಗಿ ತನ್ನೊ ಉಮ್ಮ ನೀನ್

ಬಲ್ತಿಯ ನೀನ್ ಮುತ್ತು ತನ್ನ್ ಅರ್ಗಿ ಪಿಡಿಚಿಟ್ಟ್
ಬಲನೆ ನಾನ್ ನಿಂಡೊ ಮದ್‌ರ ಪಾಲ್‌ಕುಡಿಚಿಟ್ಟ್

ಊಟಿ ತನ್ನೆ ನೀನ್ ನಕ್ಕ್ ಬೇಡಿಯು ತೋಲೊ
ಬೇಂಡ ಬೇಂಡ ಚೆನ್ನ್ ನಾನ್ ಮೊಗ ತಿರಿಕೋಲೊ

ಸೀಕ್ ಸಂಕಟ ಬರುಂಬೊ ನಕ್ಕ್ ನೀನ್ ಬುಲಿಪಿಟ್ಟೆ
ಊಣು ಒರಕ್ ಬುಟ್ಟುದೆಚ್ಚೆ ನಂಡೆ ನೋಕ್ಕ್ಯೋಂಟೆ

ನೀನ್ ಕಾಟ್‌ರೊ ಪೋಲ್ಲೊ ಪಿರ್ಸ ಆರುಂಕಾಟ್‌ಲ್ಲೆ
ನಿಂಡೊ ಪೋಲ್ಲೊ ತೆಲಿಂಞೊ ಮನಸ್ ಆರ್‌ಗುಂ ಇಲ್ಲೆ

ಉಮ್ಮ ನೀನ್ ಸಂದೋಲತ್‌ಲೆ ಎಪ್ಪೊಂ ಇಕ್ಕೋನು
ಅಂಜಿ ನೇರವುಂ ನಿಂಡೊಕಿರ್ಘತ್ತೋ ದುಆ ನಕ್‌ಬೇನು

ನಂಡೊ ಉಮ್ಮೊಗು ದೀರ್ಘಾಯಿಸ್ ಇಟ್ಟ್‌ಕೊಡು ಅಲ್ಲಾಹ್
ಮಿಂಜುಂತೋಲೊ ಆಫಿಯತ್ತ್‌ಲೆ ಕಾತ್‌ಗಾ ಅಲ್ಲಾಹ್

- ಎಂ.ಇ. ಮಹಮದ್, ಮಡಿಕೇರಿ

ಕೊಂಕಣಿ ಕವನ



# ತೇಂ ಘಡಿ ತೋ ದೀಸ್

ತೇಂ ಘಡಿ ತೋ ದೀಸ್
ಉಗ್ಡಾಸ್ ಯೆತಾ ದಿಸಾನ್ ದೀಸ್

ಮೊಜ್ಯಾ ಪಾಳ್ಣಾಚೋ ದೀಸ್
ಹಾಂವ್ ನೆಣಾ ಆಜ್
ಜಮ್ಲಾಂನಿ ದಲೊಂವ್ಕ್ ಪುರೊ ಪಾಳ್ಣೆಂ
ಹಾಂವ್ ಪೊಳೊಂವ್ಕ್ ಪುರೊ ಏಣೆ ತೆಣೆಂ.

ಪಯ್ಲೊ ಕುಮ್ಲಾರ್ ಸ್ವೀಕಾರ್
ಕ್ರಿಸ್ತಾವಂಚೆ ಏಕ್ ಪವಿತ್ರ್ ಸಂಸ್ಕಾರ್
ಆಂಗಾರ್ ಪ್ರಜ್ವಾಳ್ಚೆ ದೂವೆಂ ವಸ್ತುರ್
ಸೊಬ್ತಾತ್ ತೇ ಆಂಜ್ ಬೊಡ್ವಾಚ್ಯಾ ರೂಪಾರ್.

ರಿಸಲ್ಟ್ ಆಯಿಲ್ಲೆಂ ತೇ ಘಡಿ
ಮೊಸಾರ್ತಾಲೇ ಪೊಳೊವ್ನ್ ಮಕಾ ತೊಡಿಂ
ಹರೆಕ್ಲ್ಯಾನ್ ಬೆಟ್‌ಯ್ತಾಲೆಂ ಮಕಾ ಶಹಬಾಸ್
ವಿಸ್ರಾಲೆಂ ಮಕಾ ಕಸ್ಟಾಚೆಂ ವಸ್ಟಾಚೇ ದೀಸ್

ನೌಕರಿಕ್ ಗೆಲ್ಲೊ ತೊ ಪಯ್ಲೊ ದೀಸ್
ಜೀವಿತಾಂತ್ ಪಾಯ್ ಭಾಯ್ರ್ ದೊವಲೊ ಸಂತೋಸ್
ಪೊಯ್ಲೊ ಸಾಂಬಾಳ್ ಮೆಳ್‌ಲ್ಲ್ಯಾ ದೀಸ್
ಮಜ್ಯಾ ಕಸ್ಟಾಂಚ್ಯಾ ಪ್ರತಿಫಳಾಂಚೆ ಸಂತೋಸ್

ಮೊಜ್ಯಾ ಕಜ್ಞಾರಾಚೋ ದೀಸ್
ಜೀವಿತಾಂತ್ ಸಾಂಗತ್ ಮೆಳುಲ್ಲೊ ಸಂತೋಸ್
ದೋನ್ ಕುಡೀ ಏಕ್ ಜಾಲ್ಲೊ ದೀಸ್
ದೇವಾನ್ ಮಾಕಾ ಬಂದ್ಲೊ ಏಕ್ ಕುರೀಸ್.

- ಚಾರ್ಲ್ಸ್ ಡಿಸೋಜ, ವಿರಾಜಪೇಟೆ

ಮರಾಠಿ ಭಾಷೆ ಕವನ

# ಅಮ್ಚ್ ದೇಶ್ಯಾಚೆ ನಸೀಬ

ಕಾಯ ಸಾಂಗು ಮೀ ಅಂತಾಚಿಲೋಕ್...!
ಲಾವಲೇ ನಹೀತಾ ಸ್ವತಂತ್ರ ಪ್ರೇಮಾಚ ಬೆಳಕ್ !
ಭರವಸಾ ದೇತ್ಯಾಲ ರಾಜಕೀಯ ಲೋಕಾಚ ಚಾಳಾ !
ಹಗರಣಾತ, ಲಂಚಾಚ ಪೈಸ್ಯಾ ಮಂದಿ ಹೆಂಚ ಖೇಳ !
ಮ್ಹಾಗಲ ಲೋಕಾಚ ರೀತ್ ರಿವಾಜ್...!

ಅಂತಾ ಅಸತ್ಯಾಲಿ ಲೋಕಾಲಿ ನಕ್ಕರ್ ಭೀ ನಾಹಿ
ರಕ್ಷಣಾಂತೂ ಅಮ್ಜ್ ದೇಶಾಲಾ ಪೈಲಾಚ್ ನಾಹಿ!
ಖರ-ಧರ್ಮ್-ಪ್ರೇಮ್-ಸಾವಧಾನ-ಮನುಷ್ಯತ್ವ
ಅಂತಾ ಕುಟ ಹಾಯ್?

ಕಾದಂಬರಿ ಪುಸ್ತಕಾತ ಅಕೀನ್ ಎವ್ಹ ಪಿಚ್ಚೇರಾತ ಹಾಯ...!
ಹೇ ಕಲಿಯುಗಾ ಮದೀ ಹುಡುಕ್ಲತರ ಮಿಳನಾರ್ ನಾಹೀ!
ಏವ್‌ಡೀ ಲೋಕ್ ಏಕ್‌ಮ್ನ ಬೋಲತಾತ್ ಭಾಷಣಾತ್
ಎಕ್ಕಾಲ ಏಕ ಸೇರಕಮಾರಿ ಹೈತ....!

ದುಬಳಾ-ಶ್ರೀಮಂತ್-ಬಗ್‌ತಾತ್, ಆಯುಕ್ತಾತ ಕೋಂಚ ಜಾತ...?
ಬೋಲತ್ಯಾಲ ಏಕ-ಕರತ್ಯಾಲ ಏಕ!
ಗಾಂಧಿ-ಬುದ್ಧ-ಬಸವಣ್ಣ-ಅಕೀನ್ ಜಲಮ್ಲತ್ರ...
ಹೋಯಲ್ ಅಮ್ಚ್ ದೇಶ್ ಸುರಕ್ಷೀತ್ !
ಅಮ್ಚ್ ದೇಶ-ಭಾಷಾ ಸಾಟಿ ಕರಲ್ಯಾಯ್ ಭಾರತ್ ಮಾತಾಚಿಂತಾ!!

- ಎಚ್. ಬೀಮರಾವ್ ವಾಷ್ಠರ (ಶಾಸ್ತ್ರಿ), ಮಡಿಕೇರಿ

ತೆಲುಗು ಕವನ



# ವೀಳ್ಳೇನಾ... ಮನಯುವತಕು ಮಾರ್ಗದರ್ಶಕುಲು...?


ಗಾಂಧೀಗಾರಿ ಪೋರಾಟಂಲೋ ಸ್ವಾತಂತ್ರ್ಯಂ ವಚ್ಚಿಂದಿ,
ಅಪ್ಪುಡು ಅಂತಯೂ ಒಕ್ಕಟೇ... ತೆಲ್ಲದೊರಲನಿ ತರಿಮೆಯ್ಯಡಮೇ...
ಮನದೇಶಂ ನುಂಚಿ ತರಿಮೆಯ್ಯಡಮೆ
ಎಂದರೆಂದರೋ ಮಹನೀಯುಲು.... ಆಸ್ತುಲನಿ-ಪ್ರಾಣಾಲನಿ
ವದಲುಕುನ್ನಾರು
ಸಂಸಾರಾಲನೇ ಪೋಗೊಟ್ಟುಕುನ್ನಾರು
ಕಾನಿ... ಪ್ರಜಾಸ್ವಾಮ್ಯಂ ವಚ್ಚಿಂದಿ... ಗಾಂಧೀಗಾರಿ ವೆನಕುನ್ನ... ಅಂದರಿ...
ಪೋರಾಟಂ ಸಾರ್ಥಕ್ಯಮೆಯ್ಯಿಂದಿ...
ತೆಲ್ಲದೊರಲು ವೆಳ್ಳಿನಾ... ಪ್ರಜಾಸ್ವಾಮ್ಯಂ ವಚ್ಚಿನಾ...
ಇಂಟಿದೊಂಗಲ ಪೋರು ಎಕ್ಕುವೈಯ್ಯಿಂದಿ
ಅನ್ನೀ ರಂಗಲ್ಲೋನೂ... ಅಂದರಿದಿ ಒಕೇ ಒಕ್ಕ ಅಂಶಂ... ಸ್ವಾರ್ಥಂ,
ಸ್ವಾರ್ಥಾನಿಕಿ... ಪಶುವುಲ ಗಡ್ಡಿ ತಿನ್ನಾರು...!
ಸೈನಿಕುಲ ಶವಪೆಟ್ಟೆಲು ತಿನ್ನಾರು...!
ರೈತನ್ನಲ ಮನ್ನು ತಿನ್ನಾರು...!
ಕೊಂಡಲ್ನಿ-ಕೋನಲ್ನ ತಿನ್ನಾರು...!
ಸಂಘ ಸೇವ ಪೇರುಲತೋ ಗದ್ದೆಲೆಕ್ಕಾರು...!
ಕೋಟ್ಲಕಿ ಕೋಟ್ಲು ಡಬ್ಬುನಿ ಕೊಲ್ಲಗೊಟ್ಟಾರು...
ಪ್ರಜಲ ಸೊಮ್ಮುನಿ ಕೊಲ್ಲಗೊಟ್ಟಾರು
ಗಾಂಧೀಗಾರಿ ಪೇರು ಚೆಪ್ಪಾರು, ಗಾಂಧೀ ಟೋಪಿ ವೇಶಾರು,
ಎವ್ವರೆವ್ವರೋ ಪೇರುಲೋ ಡಬ್ಬು-ಆಸ್ತುಲನಿ ಚೇಶಾರು,
ವಿದೇಶಿ ಬ್ಯಾಂಕುಲ್ಲೋ ದಾಚಾರು..!

ಈ ಚರಿತ್ರ ಹೀನುಲು... ಮೇಮೂ ಮಂಚವಾಳ್ಳಮನಿ ಪಲುಕುತೂ...
ಹಜಾರೆ... ಹಜಾರೆ.. ಅಂಟೂ... ವಾಲಿವೆಂಟ ವೆನಕ-ಮುಂದು...
ಗದ್ದೆಲೆಕ್ಕಿ ಪೋಜುಲಿಸ್ತುನ್ನಾರು...!
ವೀಳ್ಳಂತ ಪಗಟಿ ವೇಷಾಲ ಮಹಾರಾಜುಲು
ಸ್ವತಂತ್ರ ಭಾರತಂಲೋ ಚಲಾಮಣಿ ಅವುತುನ್ನ... ವೀಳ್ಳೇ,
ವೀಳ್ಳೇನಾ...!
ಮನ ಯುವತಕು ಮಾರ್ಗದರ್ಶಕುಲು...?

- ಸಬಲಂ ಭೋಜಣ್ಣ ರೆಡ್ಡಿ, ಕುಶಾಲನಗರ



ಕುಂಬಾರ ಭಾಷೆ



# ಕವಿಯೇ ಸೌಖ್ಯವೇ, ಕವನವು ಕ್ಷೇಮವೇ

ಅಂದ್ ಒಂದ್ ದಿನ ನಾ
ನೊಡ್ ದೊ ದೂರದ ಬೆಟ್ಟವ
ಬೀಸ್ ದ ಜೋರಾದ ಗಾಳಿ
ಕಾಪಾಡಕ್ಕೆ ಇಲ್ಲದ ಜೀವ

ಬೇಕ್ ನನ್ನದೆಂದ್ ನಾ
ಹೇಳೋಕುಂದು ಹೇಳ್‌ತೆ ನನ್ನ
ಮನಸ್ಸು ಗಾಳಿಲೇ ಹಾರಿ
ಬೆಟ್ಟದ ಮದ್ಯೆ ನಾ ಅನಾಥೆ

ನಾ ಹಿಡಿದ ಪೇಪರ್ ನಾ
ಹಿಡಿದ ಪೆನ್ನ್ ಬರೆಯಕ್ಕೆ
ಆಗದ ಈ ನನ್ನ ಜೀವ
ಬೇಡದ ಕಾರಣಯಿ ನನ್ನ ಬಲಿ

ನಾವಂದ್‌ಕೊಂಡದ್ದೆ
ಮಾತಾಡ್ ದೇ, ಹೇಳೋಕೊಂತಿಲ್ಲ
ಕವನದ ರೂಪಲಿ ಬರೆದ್
ತಿಳ್ ಸ್ ದಡೆ ಕ್ಯೇಮ.

- ಸುನೀತ ವಿಶ್ವನಾಥ ಹೆಚ್.ವಿ., ಬೆಟ್ಟಗೇರಿ

ಹವ್ಯಕ ಕವನ

# ಎನ್ನ ಹೆತ್ತಬ್ಬೆ

ಎನ್ನ ಹೆತ್ತಬ್ಬೆಯ ಕಂಗಳಲಿ
ಕಂಡೆ ನೂರು ಆಸೆ
ಎನ್ನ ಎತ್ತಿಕೊಂಡ ಕೈಗಳಲಿ
ತುಂಬಿ ಬೈಂದು ಭರವಸೆ.

ಬೆಳಗು ನಡುವಲಿ ಬೈಸಾರಿಯು
ಎನ್ನ ವಿಷಯದ್ದೆ ಚಿಂತೆ ಅಮ್ಮಂಗೆ
ನಡೆವಾಗ್ಲೆ, ನುಡಿವಾಗ್ಲೆ, ಹಾಡುವಾಗ್ಲೆ
ಎಲ್ಲ ನಿನ್ನದೇ ನೆನಪು ಗುಮ್ಮನಂಗೆ.


ಭೋರೆಂದು ಮಳೆ ಸುರಿಯುವಾಗ
ಸೂರ್ಯ ಕಾದು ತಲೆ ಬಿಸಿ ಮಾಡ್ವಾಗ
ಎನ್ನ ಹೆತ್ತಬ್ಬೆ ಎನ್ನದೇ ಚಿಂತೆ
ಎಲ್ಲಿ ಬುಡುತ್ತೋ ಎಲ್ಲಿ ನೆನವುತ್ತೋ ಅಂತೆ.

ಇದೆ ನೋಡು ಹೆತ್ತಬ್ಬೆಯ ಕರುಳ ಕೂಗು
ಕೇಳಿ ಬತ್ತಾ ಇದ್ದು ಸಂತೃಪ್ತಿಯ ತೇಗು
ಈ ಜಗತ್ತಲಿ ಅಬ್ಬೆಯೆಂಬ ಆಸ್ತಿ
ಇಲ್ಲದಿರೆ ನೋಡು ಜಗವೆಲ್ಲ ನಾಸ್ತಿ.

ಇದಾ ರಜ್ಜ ನೋಡು ಕೂಸೆ
ಅಬ್ಬೆಯ ಕಂಗಳಲ್ಲಿ ಎಂಥಾ ಆಸೆ!
ಮಾಣಿಯ ಮೋರೆಯಲಿ ಮೂಡಿದ್ದು ಮೀಸೆ
ಮುಂದಿನ ಜೀವನದ್ದು ಒಂದೇ ಭರವಸೆ!

- ಅಕ್ಷತಾ ನೀರಬಿದಿರೆ

ತುಳು ಕವನ



# ಕನಡ್ ಬತ್ತ್‌ನಾಯೆ

ಮುರಾನಿ ಕನೊಡ್ ತೂಯೆ ಬಕ್ಕ ತೆರೆ
ಕೈಟೊಂಜಿ ಕೋಲ್, ಸಪೂರದ ಮೋರೆ
ಪ್ರಕಾಶಮಾನ ಕಣ್ಣ್‌ಲೆಗ್ ಪರತ್ತ್ ಕನ್ನಡಕೊ
ತೂಯಿನೇ ತೂಯೆ ಎಂಕ್ ಮೈಯಿಡೀ ನಡುಕೊ.

ಏತ್ ತರೆ ಕಿರುಂಬುಂಡ್‌ಲಾ ನೆನಪಾಪುಜ್ಜಿ
ಹಾಳ್ ನೆನಪ್ ನೆನ್‌ತ್‌ನಾಗ ಬರ್‌ಪುಜ್ಜಿ
ಕಿರುಂಬ್‌ದ್ ಉದ್‌ರ್‌ಂಡ್ ಇತ್ತ್‌ನ ನಾಲ್ ಕೂಜೆಲ್
ದೆತ್ತ್‌ಜಿ ಬುಕ್ಕೊಲ ನೆನಪ್‌ಡಿಲ್ಪ್ ಬಾಕಿಲ್....

ಏರಾದಿಪ್ಪ ಈ ಅಜ್ಜೆ?
ಓಲೋ ತೂಯಿ ಲೆಕ್ಕ ಆಪುಜ್ಜೆ?
ಇಜ್ಜಿ, ಯಾನ್ ತೂಯಿನವು ಫೋಟೋ ಮಾತ್ರ
ಗೋಡೆ ಮಿತ್ತ್ ಇತ್ತ್‌ನ ಕೈಟ್ ನೂಲುನ ಸೂತ್ರ
ಆಂ! ಇತ್ತೆ ನೆನಪಾಂಡ್ ತೂಲೆ
ಏರ್ ಈ ಅಜ್ಜೆ ಪನ್‌ಲೆ!
ಇಂಬೆರ್ ಗಾಂಧೀ ಅಜ್ಜೆರ್?

ಭಾರತೊಗ್ ಸ್ವಾತಂತ್ರ್ಯ ಕೊಂಡತ್ತಿನ ಅಜ್ಜೆರ್!
ಅಯ್ಯೋ! ಇಂಬೆರ್ ದಾಯೆ ಬತ್ತೆರ್ ಇತ್ತೆ?
ದೇಶದ ಪರಿಸ್ಥಿತಿ ಪಾಕ ಹಾಳಾತ್‌ಂಡತ್ತೆ?
ಅಯೋ! ಎಂಚಿನ ಪನೊಂದುಲ್ಲೆರ್ ಅಜ್ಜೆರ್
ಇಜ್ಜಿ ಬಾಲೆ ದಾಲ ಕೇನೊಂದಿಂಜಿಂದ್ ಪನ್ಪೆರ್!

ತೊಪ್ಪೊಂದಿತ್ತ್‌ಲೆಕ್ಕೊನೇ ಕರಗ್‌ದ್ ಪೋಯೆರೇ ಅಜ್ಜೆರ್!
ಕೊರ್‌ದ್ ನಂಕ್ ಮಾಂತ ಸ್ವಾತಂತ್ರ್ಯ ದೀಪೊದ ತುಡರ್?
ಇತ್ತೆ ತೂಪೆ-ಗೋಡೆದ ಮಿತ್ತ್ ಖಾಲಿ ಚೌಕಟ್ಟ್ ಮಾತ್ರೊ
ಆ ಮಹಾತ್ಮನಾತ್ಮೊ ಪಾರ್‌ದ್ ಪೋಂಡಾ ಬುಡ್‌ದ್ ನೆನಪ್‌ನ ಮಾತ್ರೊ?

- ನೀರಬಿದಿರೆ ನಾರಾಯಣ, ಮಡಿಕೇರಿ



ಅರೆ ಭಾಷೆ ಕವನ

# ತುಡುಗು ದನಗಳ ಪಾಡ್

ಹಿಂದೆ ಇದಾಗಿತ್ತ್ ಬಾಣೆ ಬಯಲ್
ಇಂದ್ ಊರಿಗೇ ಮಾದರಿ ತೋಟ
ತೋಟಕೆ ಐದೆಳೆ ತಂತಿ ಬೇಲಿ
ಬೇಲಿ ಸುತ್ತ ದನಗಳ ಕಳ್ಳನಡಿಗೆ
ಕಣ್ಣೆಲ್ಲ ತೋಟದ ಹುಲ್ಲು ಕಡೆಗೆ

ನೋಡ್ತ ನೋಡ್ತ ಘಟಿಂಗ ಎತ್ತೊಂದು
ಏಕಾಏಕಿ ಹಾರ್ತ್ ಬೇಲಿಕಡ್ಪ
ಕುತ್ತಿಗೆನ ದೊಡ್ಡ ಕುಂಟೆಯಡ್ಕ
ಒಂದೊಂದಾಗಿ ಹಾರಿದೊ ಸೊಕ್ಕಿದವೆಲ್ಲ
ತೋಟ ಎಲ್ಲಾ ಸುತ್ತಿ ಹಾಯಾಗಿ ಮಲ್ಗಿದೊ
ಹೊಟ್ಟೆ ಬಿರಿಯ ಸಿಕ್ಕಿದೆಲ್ಲಾ ಮೇದ್

ಪೇಟೆಂದ ಬಂದ ತೋಟದೊಡೆಯ
ಆಳ್‌ಗಳ ಸೇರ್ಸಿ ಕಂಡಿಲಿನಿಲ್ಸಿ
ದೊಡ್ಡಿಗೆ ಕೂಡ್ಸಿದೊ ದನಗಳನೆಲ್ಲ
ಉಪವಾಸ ಸೆರೆವಾಸಂದ ಕಂಗೆಟ್ಟ
ಪಾಪಿ ದಳಗಳಿಗೀಗ ಮರ್ರೋಗುಟು
ಗುಟುರು ಹಾಕುವ ಕೇರ್ ಬಡಿವ
ಐಲಾಟ ಹುಡುಗಾಟಗಳೆಲ್ಲ.

- ಕುಲ್ಲಚನ ಕಾರ್ಯಪ್ಪ, ಕುಂಬಳದಾಳು



# ಮಲೆನಾಡ್

ಮಲೆನಾಡ ಮೈಮ್ಯಾಲೆ ಹಾಸಿಟ್ಟು ಹಸರ್ |
ತಂದುಟ್ಟು ಬಾಳ್‌ಲಿ ನೆಮ್ಮದಿನ ಉಸ್‌ರ್ ||

ಎತ್ತ ನೋಡ್‌ರೆ ಅಲ್ಲಿ ಮಲೆ ಕುಂದು ಸಾಲ್ |
ಆಕಾಶನ ಮುಟ್ಟಿ ಮುತ್ತಿಡುವ ಎತ್ತರದ ಮರಗ ||

ನೆರಳ್‌ಲಿ ನಿತ್ತಿರುವ ಕಾಫಿನ ಗಿಡಗ |
ಅಲ್ಲಲ್ಲಿ ಇಣ್‌ಕುವ ಕಿತ್ತುಳಿ ಮರಗ ||

ಹೆಮ್ಮರನ ತಬ್ಬಿರುವ ಮೆಣಸ್‌ನಾ ಬಳ್ಳಿಗ |
ಇಳಿಜಾರ್ ಜಾಗಲಿ ಘಮ ಘಮದ ಯಾಲಕ್ಕಿ ||

ಬೇಲಿಲಿ ನೆಗಾಡುವ ಮಲೆನಾಡ ಹೂವುಗ |
ಕೈ ಬೀಸಿ ಕರ್ದವೆ ಸ್ವಾಗತನ ಹೇಳಿ ||

ನೋಡಿಕೆ ಲಾಯ್ಕ ಇಲ್ಲಿನ ಪರಿಸರ |
ತಂದದೆ ಮನಸ್‌ಗೆ ಅದೆಂತಾ ಸಿರಿತನ ||

- ಕಡ್ಲೇರ ತುಳಸಿ ಮೋಹನ್, ಬೆಟ್ಟಗೇರಿ





# ಉತ್ತರನೇ ಇಲ್ಲದ ಪ್ರಶ್ನೆ

ನನ್ನ ಮನಸ್‌ನ ಸುತ್ತ
ಅದೇ ಪ್ರಶ್ನೆ ಅದೇ ಹುಡುಕಾಟ
ಪ್ರಶ್ನೆಗೆ ಉತ್ತರ ಹೇಳವು ಇಲ್ಲೆ
ಹುಡುಕಾಟಕೆ ದಾರಿ ತೋರ್ಸವು ಇಲ್ಲೆ.

ಅಂವ ಯಾರ್? ಹಿಂಗೆ ಯಾಕಿರ್ದು?
ಇಲ್ಲಿಗೆ ಹೆಂಗೆ ಬಾತ್? ಯಾಕೆತೇಳಿ ಬಾತ್?
ಉಡಿಕೆ ಬಟ್ಟೆನೂ ಇಲ್ಲೆ, ಉಂಬಕೆ ಅನ್ನನೂ ಇಲ್ಲೆ
ಉಳಿಯಕೆ ಜಾಗನೂ ಇಲ್ಲೆ
ಹೆಂಗಿರ್ದು ಆ ಬದ್‌ಕ್.

ಎಷ್ಟೋ ಜನ ನಡ್‌ದಾಡ್ದ ದಾರಿಲಿ,
ಎಷ್ಟೋ ಜನ ಹೋಗಿ ಬರ್ತಿದ್ದ ಬಸ್ಸ್‌ಲಿ,
ಎಷ್ಟೋ ಜನ ಕಾಯ್ತಿದ್ದ ನಿಲ್ದಾಣಲಿ,
ಸಂಬಂಧ ಇಲ್ಲದೆ ನಡ್‌ಸ್‌ತಿರುವ
ಅವನ ಬದ್‌ಕ್ ಉತ್ತರ ಇಲ್ಲದ ಪ್ರಶ್ನೆನಂಗೆ.

ಆಸೆ ಕನಸ್‌ಗಳ ಸುತ್ತ ಹಾಕಿರ್ವ ಬೇಲಿ
ಕಷ್ಟ ಸುಖಗಳ ಸುತ್ತ ಹೆಣೆದಿರ್ವ ಬಲೆ
ಬದ್‌ಕ್ ಬ್ಯಾಡತೇಳ್‌ರೂ, ಬುಡದಿರುವ ಬಾಳ್
ಇದೇ ಅವನ ಹೇಳಿಕಣಿಕಾಗದ ಉತ್ತರ.

- ಕಡ್ಲೇರ ಜಯಲಕ್ಷ್ಮಿ ಮೋಹನ್‌ಕುಮಾರ್, ಬೆಟ್ಟಗೇರಿ



# ನೆಂಟ್ರ್‌ಗ

ಬಂದೋ ಬಂದೋ ನೆಂಟ್ರ್‌ಗ
ದೂರ ದೂರಂದ ||2||

ಅತ್ತೆ ಮಾವಂದರಲ್ಲ
ಬಾವಮೈದ ಅಂತೂ ಅಲ್ಲವೆ ಅಲ್ಲ
ಅಂಥ ನೆಂಟ್ರ ಸತ್ಕಾರಕ್ಕೆ ಕಾದವೆ ಜನ
ನಾ ಮುಂದು ತಾ ಮುಂದುತ್ತೆಲ್ಲಾ

ಬಂದೋ ಬಂದೋ ನೆಂಟ್ರ್‌ಗ
ದೂರ ದೂರಂದ ||2||

ಬಂದವ್ರುಕೆ ನಡ್‌ದದೆ ಇಲ್ಲಿ
ಅದ್ದೂರಿ ಅತಿಥಿ ಸತ್ಕಾರ
ಮಾಡುವೆ ತರತರ ಅಡುಗೆನ ಚಮತ್ಕಾರ
ಆದರೆ ಅದರಲಿಲ್ಲೆ ಪ್ರೀತಿಯ ತಕ್ಕಾರ

ಬಂದೋ ಬಂದೋ ನೆಂಟ್ರ್‌ಗ
ದೂರ ದೂರಂದ ||2||

ಜಾತಿಮತಗಳ ಭೇದ ಇಲ್ಲಿಲ್ಲೆ
ನಂದ್ ನಮ್ಮದ್‌ತ್ತೇಳುವ ಧ್ವನಿ ಕೇಳುಲೆ
ಎಲ್ಲೆಲ್ಲೂ ಮೆರಿತ್ತುಟ್ಟು
ವಿಶ್ವಮಾನವತೆಯ ಗುಟ್ಟು

ಬಂದೋ ಬಂದೋ ನೆಂಟ್ರ್‌ಗ
ದೂರ ದೂರಂದ ||2||

ಹಬ್ಬ ಹುಣ್ಣಿಮೆ ನಮಿಗಿಲ್ಲೆ
ಅದ್ಯಾವುದರ ಲೆಕ್ಕ ಇಲ್ಲಿ ಬಾಲೆ
ಬಾದೊಂದೆ ಲೆಕ್ಕ
ದಿನಕ್ಕೆಸ್ಟ್ ಬಂದದೆ ರೊಕ್ಕ

ಬಂದೋ ಬಂದೋ ನೆಂಟ್ರಾಗ
ದೂರ ದೂರಂದ ||2||

ಕಾಂಬಕ್ಕಿಲೆ ಇನ್ನ್
ಹತ್ತಾರ್ ದಿನಕ್ಕೆ
ಮರ ಕಾಡ್ ಪರಿಸರ
ಕಾಂಬೊದೊಂದೆ ಜನ ತರತರ.

ಬಂದೋ ಬಂದೋ ನೆಂಟ್ರಾಗ
ದೂರ ದೂರಂದ ||2||

- ಪುದಿಯನೆರವನ ರೇವತಿ ರಮೇಶ, ಮಡಿಕೇರಿ



ಮಲಯಾಳಂ ಕವನ



## ಅಧಿಕಾರಂ

ಚೆಇಂಞು ನಾರುನ್ನ ಭರಣಕೂಡಂಜಳಿಲ್,
ಕಾಲಂಜಳ್ ಕೆಟ್ಟಿಪಡುತ್ತ ತತ್ವಂ.

ನಾಮೆಂದರಿಂಞಿ ನರಭೋಜಿಗಳ್‌ಕಿದು
ಕೇವಲಂ ಭೂಷಣಾಂ ವೀಂಡುಂಮೆತ್ರ,
ಜಾಥಗಳ್ ಮೀಟಿಂಗುಗಳ್ ಕೊಡಿಕೀಯಿಲ್ ನೀ,
ಇನ್ನೀ ಕಬಂಧಜಳ್ ಉರಂಞುತುಳ್ಳಾಂ.

ನಾಮೆತ್ರ ಕಂಡದಾಣಿ ಕುಲಂ ಕೆಟ್ಟೋರ್ದನ್,
ಪೂರಕ್ಕಳಿಯಂ ವಾಗ್ದಾನಂಜಳುಂ.

ಪಾರ್ಟಿ ಪೂಳಿಪನ್ಮಾರ್ ಕೆಟ್ಟುಂ ಪುದುಪೆಣ್ಣಿನ್
ಕೋಟಯಿಲ್ ನಮ್ಮಳ್ ಕೆಣಿಂಞಿಪೋಗಾಂ
ಕಿಡ್ನಿ ಎಡುಪವರ್ ಕಮ್ಮಿಷನ್ ಪಟ್ಟುವೋರ್
ಪತ್ನಿತನ್ ಪಚ್ಚಮಾಂಸಂ ವಿಲ್ಕುವೋರ್.

ಎಂಜೊ ಅಧಿಕಾರಂ ಉಳ್ಳಿಲ್ ತಿಳಪ್ಪಿಚ್ಚು
ತಳ್ಳುನ್ನು ಸ್ನೇಹಬಂದಂಜಳ್ ನೀಳೆ

ನಮ್ಮಳ್ ಅಲಯುನ್ನೊರುಪಿಡಿ ಚೋರಿನಾಯ್
ವಿಜುಂ ಕರುಳಮಾಯ್ ಭಾರತತ್ತಿಲ್

ವನ್ನುವೋ ಸ್ವಾತಂತ್ರ್ಯಂ ಆರ್ಕರಿಯಾಂ ಗಾಂಧಿ
ಪಿನ್ನಿಟ್ಟ ವೀಥಿಗಳ್ ಶೂನ್ಯಮಾಗೆ,

ಪಟ್ಟಿಣಿ ಕುಳ್ಳಿಲುಂ ಓಟುಚೆಯ್ಯಾನ್ ನಮ್ಮಳ್
ಎತ್ತುಂಬೋಳ್ ಚಿಂದಚಿರಗುನೀರ್ತುಂ

ಎಲ್ಲಾಂ ಕಯಿಂಞಾಲ್ ಅವರ್ ಜೀವಿಕುಂಮೇಡ
ನಮ್ಮಳ್ಕು ಮುನ್ನಿಲ್ ಮರೀಚಿಕೆಯಾಯ್.

ಧನ್ಯ ವಾಗ್ದಾನಂಜ್ಞಳ್‌ತನ್ ಅಗ್ನಿಯಿಲ್ ಚತ್ತು
ಮಣ್ಣಾಡಂಞೀ ತಲಮುರಗಳ್

- ದೇವಿದಾಸ್ ಕೆ.ಪಿ.. ಗೋಣಿಕೊಪ್ಪಲು

ಮಕ್ಕಳ ಕವನ



# ನಿಸ್ವಾರ್ಥ ಸೇವೆ

ಓ ನಿಸರ್ಗವೇ... ನೀನೆಂಥಾ ತ್ಯಾಗಮಯಿ !
ನಿನ್ನ ಸೌಂದರ್ಯ ಸವಿಯಲು
ನೀನು ಕೇಳಲಾರೆ ಬೆಲೆ !

ಓ ಆಗಸವೇ....
ಇಳೆಯ ಜೀವಕ್ಕೆ ನೀನೀಡುವೆ ಮಳೆ
ಕೇಳಿಲ್ಲ ನೀನೆಂದೂ ಅದಕ್ಕೆ ಬೆಲೆ

ಓ.. ಸೂರ್ಯನೇ..
ನೀನೀಡುವ ಶಾಖ-ಬೆಳಕಿಗೆ
ಕೊಟ್ಟಿಲ್ಲ ನಾವೆಂದೂ ತೆರಿಗೆ

ಓ.. ಪೂರ್ಣಚಂದ್ರನೆ
ಆಹ್ಲಾದಭರಿತ ನಿನ್ನ ಬೆಳದಿಂಗಳಿಗೆ
ನಾವೆಂದೂ ನೀಡಿಲ್ಲ ಬೆಲೆ

ಓ ಪ್ರಕೃತಿ ಮಾತೆಯೇ
ನಿನ್ನ ಹಸಿರು ನಮ್ಮ ಕಂಗಳಿಗೆ
ನೀಡುವುದು ಕಾಂತಿ
ನಿನಗೆ ನೀಡುತ್ತಿಲ್ಲ ನಾವು ಶಾಂತಿ !

- ಮೋನಿಷ್ ವಿ.ಜೆ., ಮಡಿಕೇರಿ




# ಮರೆವು - ನೆನಪು

ಮರೆಯಲಾರೆ ಆ ಸಿಹಿ ನೆನಪು
ಸಹಿ ಹಾಕುವೆ ಮನದಲ್ಲಿ ಮೂಡುತ್ತಿರುವ ಹೊನ್ನಿನ ಹೊಳಪು
ನೆನಪು ಮಳೆಯ ಹನಿಯ ಹಾಗೆ
ಮರೆವು ಬೀಸುವ ಗಾಳಿಯ ಹಾಗೆ
ನೆನಪು ಬೆಳೆಯುವ ಗಿಡದ ಹಾಗೆ
ಮರೆವು ಮುದುರುವ ಹೂವಿನ ಹಾಗೆ

ಹೇಗಿದೆ? ನೆನಪು-ಮರೆವಿನ ಈ ವಿಚಿತ್ರ ಲಕ್ಷಣ
ನೆನಪು ಹರಿಯುವ ಹೊಳೆಯ ಹಾಗೆ
ಮರೆವು ಕುಡಿದ ನೀರಿನ ಹಾಗೆ
ಮರೆವು-ನೆನಪು ಇಲ್ಲದ ಜೀವನ
ನಿಂತಿರುವ ಕಲ್ಲು ಬಂಡೆಯ ಹಾಗೆ!

- ಪವನ್ ಟಿ.ಎಸ್., ಮಡಿಕೇರಿ



# ಕಾಗೆ

ಕಾಗೆ, ನಿನ್ನ ಬಣ್ಣ ಕಪ್ಪು
ಎಂದು ಹೀಯಾಳಿಸುವರು ಜನ !
ಆದರೆ, ನಿನ್ನ ಬಣ್ಣ ಕಪ್ಪಾದರೂ
ನನಗೆ ನೀನು ಒಪ್ಪು...!
ನಿನ್ನ ಕಾ... ಕಾ... ಎಂಬ ಕೂಗಿಗೆ
ಬೇರೆ ಅರ್ಥಕಟ್ಟಿ...?
ಜನ ನಿನ್ನನ್ನು ಬೈಯುವರು !
ನಿನ್ನಿಷ್ಟದಂತೆ ಕೂಗಲು
ನಿನಗೆ ಸ್ವಾತಂತ್ರ್ಯವಿಲ್ಲವೆ...?
ನಿನ್ನ ಕಾ... ಕಾ... ಶಬ್ಧಕ್ಕೆ
ಜನ ಥೂ... ಛೀ... ಎನ್ನುವರು...
ಆದರೆ ಒಂದಗುಳು ಕಂಡರೆ
ನೀನು ಕರೆಯುವೆ
ಇಡೀ ಕುಟುಂಬವನ್ನು
ಕಾ.... ಕಾ.... ಎನುತಾ
ಇಂಥ ಸತ್ಯ ಜನರಿಗೆ ಗೊತ್ತೇ
ಇಲ್ಲ ಬಿಡು!

- ಜಿ.ಎಸ್. ಕೃತಜ್ಞಾ ಬೆಸೂರು, ಕೊಡ್ಲಿಪೇಟೆ

# ಸ್ಫೂರ್ತಿ - ಕೀರ್ತಿ



ಅ ಆ ಇ ಈ ಬರೆಯುತ ಕಲಿತ
ಕನ್ನಡ ಕಸ್ತೂರಿ
ನಲಿಯುತ ಕುಣಿಯುತ
ಹರ್ಷದಿ ಊದಿದ ತಂಗಿಯ ತುತ್ತೂರಿ

ಆಟದಿ ಪಾಠ ಕಲಿಯುತ ಮುನ್ನ (ಮಗು)
ಬೆಳಕನು ಕಾಣುವನು
ಹಾಡುತ ನಲಿಯುತ ಪುಟಾಣಿಗಳೆಲ್ಲ
ಪಾಠವ ಕಲಿಯುವರು

ನಗು ನಗು ನಗುತಲಿ ಪಾಠವ ಹೇಳುತ
ಬೋಧನೆ ಮಾಡುವರು
ಕಥೆಯನು ಹೇಳುತ ಜೀವವ ತುಂಬುತ
ಮುದವನು ನೀಡುವರು

ಪ್ರೀತಿಯ ಮಾತಲಿ ಸ್ಫೂರ್ತಿಯ
ನೀಡುತ ಅಕ್ಷರ ಕಲಿಸುವರು
ಜ್ಞಾನವ ಬೆಳೆಸುತ ಬೆಳಕನು ನೀಡುತ
ದಾರಿಯ ತೋರುವರು.

ಒಳ್ಳೆಯ ಅಂಕದಿ ತೇರ್ಗಡೆ ಹೊಂದಿ
ಹೆಸರನು ಪಡೆಯುವರು
ಶಿಸ್ತಲಿ ಕಲಿಯುತ ಹೆಸರನು ಉಳಿಸುತ
ಶಾಲೆಯ ಕೀರ್ತಿಯ ಬೆಳೆಸುವರು.

- ಸುಕನ್ಯ ಎಸ್.ಪಿ., ಮಡಿಕೇರಿ



# ಚುಟುಕುಗಳು

## ಅಸ್ತ್ರ

ಹೆಣ್ಣಿನ ಕಣ್ಣೀರ  
ಒಂದೊಂದು ಬಿಂದು  
ಪುರಾಣದ ಪಾಶು ಪತಾಸ್ತ್ರ  
ಸರ್ಪಾಸ್ತ್ರಕ್ಕಿಂತಲೂ ಮುಂದು!

## ನೋಟ

ಹೆಣ್ಣಿನ ಕಣ್ಣಿನಲ್ಲಿದೆ  
ಸೌಂದರ್ಯದ ಚಿಹ್ನೆ  
ಆದ್ದರಿಂದ ನೋಡುತ್ತಾನೆ  
ಹುಡುಗ ಹೆಣ್ಣಿನ ಕಣ್ಣೆ!

## ಪರಿವರ್ತನೆ

ರಾಜಕೀಯದ ಆಟದಲ್ಲಿ ಜನಾರ್ಧನ ರೆಡ್ಡಿ ಸೋತು  
ಸಿಬಿಐ ಬಂಧನದಿ ಜೈಲಿನೊಳಗೆ ಕೂತು  
ಕಲಿತ್ತಿದ್ದಾರೆ ಈಗ ಜೀವನದಿ ಬುದ್ಧಿ  
ಆಧ್ಯಾತ್ಮಿಕದತ್ತ ಚಿತ್ತ ಈಗ ಅಂತರಂಗ ಶುದ್ಧಿ !

- ಹಾ.ತಿ. ಜಯಪ್ರಕಾಶ್, ಸೋಮವಾರಪೇಟೆ

English Poem



# There I Wander

Why I wan't to see the world ?
Why I wan't to & wander the world ?
When your body is like a world
I will see that and I will wander there.

why I wan't to learn language ?
Why I wan't t look dictionary ?
When your hairs are telling the story
I listen that and I learn there.


Why I wan't to sing a song ?
Why I wan't to measure the music ?
When you are the tune, the measure and rhythm.
I will sing that and I speak that.

Why I wan't to climb the hill ?
Why I wan't to descend the valley ?
When everything is with in your body
There only I wander and climb and descend.

Why I wan't to see lightning ?
Why I wan't to see light ?
When everything is hidden in your smile
There only I see and look the light.

**- C.M. Akshaya Mallorahatty, Kodlipet**

# An ode to Anna Hazare



He Quietly sat on the ground in steadfast will,
To urge the ruling heads to pass the Jan Lok Pal bill,
The persona was none other than Anna Hazare,
Who was considered India's only promising ray.

His lean, thin body withered by the raising age
Has never been a constraint, as he had to wage
A war against corruption, bribe and many more
Ugly heads which swindled Free India to its core.

Though India crossed more than six decades and plus,
And yet, the life of laymen remained in a shabby mess.
The ruling kings have indiscriminately looted her every wealth
Keeping India always in consistently deteriorating health.

"No more can this be tolerated", Anna bravely uttered,
And urged that the top brass also be included,
And all the wealth that was drained to the Swiss bank.
In the form of black money be brought back in frank.

Backed by the youngsters in such a large number,
And the brouhaha came from every nook and corner
The authorities finally had to buckle and relent
To include Anna's wisest vision in the bill to be sent.

**- Kiggal S. Gireesh, Murnad**

# My Native Coorg



The tiny little drops of rain
Made my life a beautiful train
The land covered with mist and snow
It's my native 'coorg' that I make you know

Madikeri ,Virajpet and Somwarpet
Misty Rajaseat is very sweet
Nice to enjoy the Talacauvery climb
History hidden in Gaddige tomb

Abbi, Irpu, Mallali falls
Brahmagiri, Pushpagiri many talls
Kaveri, Kannike sacred rivers
Anthurium, Gladiolus, dahlia flowers

Coffee,Pepper, tea cardamom
Honey bees waiting for flowers to blossom
Dubare, Nagarahole greenery forest
Will definitely fill visitors interest

Happy to be on the top of the hill
Experiencing the natural chill
Not to miss the naughty thrill
come and make your heart fulfil.

**- Kottakeriyana Shreeja Dayananda, Madikeri**



## Selfish Humanbeings

Human beings mine selfish in the before days,
And it is more in the present days.
Jesus Chrit was crucified long ago,
For not obeying the goat, full of ego.
Later on, the people understood his sanctity,
And worshipped him as God for his nobility.
Sadism and Fadism were present in them
Shree Rama and Shree Krishna also Suffered then
And became V.famous afterwards then
Now a days, the rule of the politicians are V. worst'
And we have to make the rule as V. best.
Reverend Anna Hazarre is trying for it,
And we shall al co-operate him for it.
Let us pray the Almighty for the best India
And also his blessings for the famous India

***"Jai HInd"***

**- A.M. Belliappa, Cherambane**



# दशहरा

सडिकेरी का सुन्दर दशहरा
रात से लेकर होते है, सबेरा ।
इस बीच जगमगाते है, रोश्नी से
वारिश होकर सब जगह
गीला होते है पानी से ।
फिर भी इस सुन्दर द्रश्य
आकार्शित करते है, लोगों को य
रथ में ओये हुए इस
देवी का द्रश्य ।
सभ्व लोगों कों जग्रुत करते है
जाग जाओ, बूरे कास से दूर रहो ।
हर सात होतें है, दशहरा
सडिकेरी का सुन्दर दशहरा ।

**- M.E. Monoj, Madikeri**



# ಮಡಿಕೇರಿ ದಸರಾ ಬಹುಭಾಷಾ ಕವಿಗೋಷ್ಠಿ ಸಮಿತಿ – ೨೦೧೧

*ಅಧ್ಯಕ್ಷರು*

ಶ್ರೀ ಎಂ. ಶ್ರೀಧರ್ ಹೂವಲ್ಲಿ

*ಸಂಚಾಲಕರು*

ಶ್ರೀ ಕುಡೆಕಲ್ ಸಂತೋಷ್

*ಸದಸ್ಯರುಗಳು*

ಶ್ರೀ ಅನಿಲ್ ಹೆಚ್. ಟಿ., ಶ್ರೀ ಉಮೇಶ್ ಎಸ್. ಜಿ., ಶ್ರೀ ಕೆ. ತಿಮ್ಮಪ್ಪ, ಶ್ರೀ ಬಿ.ಸಿ. ದಿನೇಶ್, ಶ್ರೀ ಜಿ.ಕೆ. ಬಾಲಕೃಷ್ಣ, ಶ್ರೀ ಸದೇಶ್ ಕಾರ್ಮಾಡ್, ಶ್ರೀ ಜಿ.ವಿ. ರವಿಕುಮಾರ್, ಶ್ರೀ ಕೆ.ಬಿ. ಮಹಂತೇಶ್, ಶ್ರೀ ಟಿ.ಕೆ. ಸಂತೋಷ್, ಶ್ರೀ ಎಸ್.ಕೆ. ಲಕ್ಷ್ಮೀಶ್, ಶ್ರೀ ಲಕ್ಷ್ಮಿಪ್ರಸಾದ್ ಪೆರ್ಲ, ಶ್ರೀ ಜಗದೀಶ್ ಬೆಳ್ಯಪ್ಪ, ಶ್ರೀಮತಿ ಸವಿತಾ ರೈ, ಶ್ರೀ ಕೆ.ಪಿ. ಗಿರಿಧರ್, ಶ್ರೀ ಮೋಹನ್, ಶ್ರೀ ಆನಂದ್ ಕೊಡಗು, ಶ್ರೀ ಉದಯಕುಮಾರ್, ಶ್ರೀ ಉಜ್ವಲ್ ರಂಜಿತ್, ಶ್ರೀ ಗಣೇಶ್, ಶ್ರೀ ಲಕ್ಷ್ಮೀಶ್ ಕ್ಲಾಸಿ, ಶ್ರೀ ಎಂ.ಪಿ. ಕೃಷ್ಣರಾಜ್, ಶ್ರೀ ಶ್ರೀಕಾಂತ್ ಕಲ್ಲಮ್ಮನವರ, ಶ್ರೀ ಎಂ.ಎನ್. ಮಂಜುನಾಥ್, ಶ್ರೀ ಅನು ಕಾರ್ಯಪ್ಪ, ಶ್ರೀಮತಿ ಮಾಯಮ್ಮ, ಶ್ರೀಮತಿ ಧರ್ಮಾವತಿ


*ಕವನಗಳ ಆಯ್ಕೆಗಾರರು*

ಶ್ರೀಮತಿ ನಯನಾ ಕಶ್ಯಪ್, ಶ್ರೀಮತಿ ತೆನ್ನಿರ ರಾಧಾ ಪೊನ್ನಪ್ಪ, ಶ್ರೀ ನಾಗೇಶ್ ಕಾಲೂರು, ಶ್ರೀ ಎಂ.ಇ. ಮಹಮ್ಮದ್, ಶ್ರೀ ಕುಡೆಕಲ್ ಸಂತೋಷ್

# ಕವಿ ಹೃದಯದಲ್ಲಿ...



ಶ್ರೀಧರ್ ಹೂವಲ್ಲಿ
*ಅಧ್ಯಕ್ಷರು, ದಸರಾ ಕವಿಗೋಷ್ಠಿ ಸಮಿತಿ*




ಕುಡೆಕಲ್ ಸಂತೋಷ್
*ಸಂಚಾಲಕರು, ದಸರಾ ಕವಿಗೋಷ್ಠಿ ಸಮಿತಿ*



ಬಿ.ಆರ್. ಜೋಯಪ್ಪ
*ಮದೆಗ್ರಾಮ*



ರಾಣಿ ಅಪ್ಪಣ್ಣ
*ಬಲ್ಲಮಾವಟಿ*



ಉದಯಕುಮಾರ್
*ಬಸವನತ್ತೂರು*



ಸೌಮ್ಯಶೆಟ್ಟಿ
*ಮಡಿಕೇರಿ*



ಅಕ್ಷತಾದಯಾನಂದಶೆಟ್ಟಿ
*ಮಡಿಕೇರಿ*



ಅಬ್ದುಲ್ ರಶೀದ್
*ಕೊಳಕೇರಿ*



ಸಿದ್ಧರಾಜು ಬೆಳ್ಳಯ್ಯ
*ಮದೆಗ್ರಾಮ*



ರಾಮಚಂದ್ರರಾವ್
*ಗುಹ್ಯ ಗ್ರಾಮ*



ಸುವಿನ ಪಿ.ಆರ್.
*ಸುಳ್ಯ*



ನೆ.ಲ. ವಿಜಯಕುಮಾರ್
*ಸೋಮವಾರಪೇಟೆ*



ಬಿ.ಬಿ. ಕಿಶೋರ್‌ಕುಮಾರ್
*ತಾವೂರು*



ತೊರೆನೂರು ಸುಕುಮಾರ್
*ಚೆರಿಯಪರಂಬು*



ದಿನೇಶ್ ಕೆ. ಕಾರ್ಯಪ್ಪ
*ಮಡಿಕೇರಿ*



ರಮ್ಯ ಕೆ.ಜಿ.
*ಮೂರ್ನಾಡು*



ಕಾಜೂರು ಸತೀಶ್
*ಶರಿಕೆ*



ದಿವ್ಯಾ ಎಂ.ಎಂ.
*ಮಡಿಕೇರಿ*



ಹೇಮಾ ವಸಂತ್
*ಮಡಿಕೇರಿ*



ಮಂಜುಗೋಪಿನಾಥನ್
*ಹೊದ್ದೂರು*



ಎಚ್.ಕೆ. ತಿಲಗಾರ್
*ಕುಶಾಲನಗರ*



ಚಾಮೇರ ದಿನೇಶ್
*ಮಂಕ್ಯ*



ಇಟ್ಟೀರ ಕೆ. ರಾಜಪ್ಪ
*ತೂಚಮೇಕೇರಿ*



ಎಂ.ಇ. ಮಹಮದ್
*ಮಡಿಕೇರಿ*



ಚಾರ್ಲ್ಸ್ ಡಿಸೋಜ
*ವಿರಾಜಪೇಟೆ*




ಸಬಲಂ ಭೋಜಣ್ಣ ರೆಡ್ಡಿ
*ಚೆರಿಯಪರಂಬು*



ಸುನಿತ ವಿಶ್ವನಾಥ್
*ಬೆಟ್ಟಗೇರಿ*



ನೀರಬಿದಿರೆ ನಾರಾಯಣ
*ಮಡಿಕೇರಿ*



ಕುಲ್ಲಚನ ಕಾರ್ಯಪ್ಪ
*ಕುಂಬಳದಾಳು*



ಕಡ್ಲೇರ ತುಳಸಿ ಮೋಹನ್
*ಬೆಟ್ಟಗೇರಿ*




ಕಡ್ಲೇರ ಜಯಲಕ್ಷ್ಮಿ
*ಬೆಟ್ಟಗೇರಿ*



ಪುದಿಯನೆರವನ ರೇವತಿ
*ಮಡಿಕೇರಿ*



ದೇವಿದಾಸ್ ಕೆ.ಪಿ.
*ಗೋಣಿಕೊಪ್ಪಲು*



ಮೋನಿಷ್ ವಿ.ಜೆ.
*ಮಡಿಕೇರಿ*




ಪವನ್ ಟಿ.ಎಸ್.
*ಮಡಿಕೇರಿ*



ಸುಕನ್ಯ ಎಸ್.ಪಿ.
*ಮಡಿಕೇರಿ*



ಹಾ.ತಿ. ಜಯಪ್ರಕಾಶ್
*ಸೋಮವಾರಪೇಟೆ*



ಅಕ್ಷಯ ಮಲ್ಲೋರಪಟ್ಟಿ
*ಕೊಡ್ಲಿಪೇಟೆ*



ಕಿಗ್ಗಾಲ್ ಎಸ್. ಗಿರೀಶ್
*ಮೂರ್ನಾಡು*



ಶ್ರೀಜಾ ದಯಾನಂದ
*ಮಡಿಕೇರಿ*



ಎ.ಎಂ. ಬೆಳ್ಳಿಯಪ್ಪ
*ಚೇರಂಬಾಣೆ*




ಎಂ.ಈ. ಮನೋಜ್
*ಮಡಿಕೇರಿ*

ಮಡಿಕೇರಿ ದಸರಾ ಬಹುಭಾಷಾ ಕವಿಗೋಷ್ಠಿ ಸಮಿತಿ - 2011

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ

" ಭೂಮಿಲ್ ತಬ್ಬದ್ ಮೋಡ ಇದ್ದಂಗೆ
ಸಾಫಾಗಿ ಹಳ್ಳ ದಿಡ್ಡಿಲ್ಲದಂಗೆ
ಮಡಿಕೇರಿಲ ಮಂಜು.... "

ಮಂಜಿನ ನಗರಿ ಮಡಿಕೇರಿಯ ನಾಡಹಬ್ಬ ಇತಿಹಾಸ ಪ್ರಸಿದ್ಧ ಜನರ ಸಹಭಾಗಿತ್ವದೊಂದಿಗೆ ಜನಸ್ತೋಮವಾಗಿ ಆಚರಿಸುತ್ತಿರುವ ಸಂಭ್ರಮದ ಕಾಲಘಟ್ಟವಿದು. ನಾಡು-ನುಡಿ, ವಿಶೇಷ ಪರಂಪರೆ, ಪದ್ಧತಿಯೊಂದಿಗೆ ಸಂಸ್ಕೃತಿಯ ಶ್ರೀಮಂತಿಕೆಯು ನಾಡಿನಲ್ಲಿ ಕಲೆ-ಸಾಹಿತ್ಯದ ಭಂಡಾರ ಕೂಡ ಅಡಗಿದೆ. ಅಂತಹ ಸಾಹಿತ್ಯ ಭಂಡಾರದ ಒಳಹೊಕ್ಕು ಪದಗಳಿಗೆ ಕವನಗಳ ಮೂಲಕ ಜೀವ ತುಂಬುವ ಕಾಯಕ ಈ ಕವನ ಸಂಕುಲದಲ್ಲಿದೆ. ವಿವಿಧ ಭಾಷಿಕ ಕವಿ ಹೃದಯಗಳ ಭಾವನೆಗಳು ಇಲ್ಲಿ ಅಕ್ಷರದ ಪುಂಜಗಳಾಗಿ ಹೊರ ಹೊಮ್ಮಿವೆ.



ಕುಡೆಕಲ್ ಸಂತೋಷ್
ಸಂಚಾಲಕ